> "Where any teacher of a College is not approved by the University under sub-section (2), such teacher shall be retired from service or employment in their capacity by the governing body of the College....."

In a private College, they do not provide for pension, gratuity or anything as it stands, now what will be the fate of that lecturer if he is asked to go back? Is there any provision made for this? These are some of the lacunae in the Act. So, I wanted these things to be gone into by the sub-committee, of which Sri J. B. Mallaradhya and Sri M. P. L. Sastry are members. I only wanted to know what has been done in this regard. I never wanted to say anything about the appointments made, which are considered to be illegal and many have been disappointed though they have got better qualifications. I am not discussing that either.

(SRI S. P. RAJANNA

A mention has been made in the Governor's Address about the Bangalore Dairy. It is said that the first stage target of 50,000 litres of milk per day has already been reached. Is it being properly distributed ? As we all know all the 50,000 litres are not being supplied to the people. Many litres have been thrown out in the gutter. Can it not be made use of better ? It can as well be given to children for mid-day meal. I do not know why it should be thrown into the gutter. They are preparing butter and keeping it in cold-storage, wherein iron racks are used. I heard somebody saying that it becomes poisonous if it is kept like that. It has also come to our notice that the butter consists of worms and so it cannot be consumed after some time. As I understand they are preserving it for the last five months. I feel it is not being properly distributed. Though a number of booths have been opened, butter is not supplid to the booths for sale. For butter, people have to go to the Dairy and get it- Though there is an officer to see that this is put into market, it has not been thought of to sell it through the booths. I feel that it should be sent to the booths at least from now onwards. When 'Joy Ice Cream' can come from Bombay to Bangalore, why not butter be distributed within the State ?

I have a few words to say regarding the appointments and other things. We are sending many people to foreign countries to get themselves better qualified. But, are we utilising their services after their training ? A friend of mine, who was working as a lecturer in Geology was sent to States to get himself trained in Ceramics. He returned to the States after two years. At that time, there was a vacancy in the Porcelain Factory, which should have been given to him. But, he was posted again as lecturer. He stayed for two years, got disgusted and went back to States. For the last six years, he has been in the States enjoying better life. I can quote one other instance. A person trained in Cinematography, of M.Sc., B E., of Michigan University, was working here as Gramsevak Instructor—Audio-visual Education. Later he went on deputation to the Government of India for three years in connection with the Orientation and Study Centre at Mysore and Bhavanisagar. On his return he worked in the Orientation and Study centre hardly for four months and he was reverted back to his parent Department and by that time his own post had been changed as Artist's post and he was asked to work as Artist in the Community Development Centre, a different type of work altogether. I understand that his services would be more useful in the Information and Tourism Department. I do not know whether there are any vacancies there. This is the Tourist Year and he could have been absorbed if there was a vacancy. This has not been done. I feel such things should not be repeated. There is an Audio-visual Education Seetion in the Department. A trained Officer is not there. Some Head-master is posted there. A trained person in the subject may be posted so that his services may be best utilised. These are the

important things which had come to my notice. The Government will kindly look into all these things and do the needful in the matter. I do not want to take any more time in dealing with these subjects which may give scops for controversy. I thank the Chairman for having permitted me to speak.

†ಶ್ರೀ ಕೆ. ಟಿ. ಶಾಮಯ್ಯಗೌಡ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಅಧ್ಯಕ್ಷರೇ, ನಮ್ಮ ಮುಂದಿರುವ ರಾಜ್ಯಪಾಲರ ಭಾಷಣದ ಮೇಲೆ ಕೃತಜ್ಞತಾ ಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತಾ ನಾಲ್ಕು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯಪಾಲರು ಭಾಷಣಮಾಡುವ ಕಾಲದಲ್ಲಿ ಆ ದಿವಸ ನಮ್ಮ ವಿರೋಧಪಕ್ಷದವರು ಸಭಾತ್ಯಾಗಮಾಡಿದ್ದು ಸರಿಯಾದುದಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಜಿ. ಎ. ಅಂಜನಪ್ಪ.—ಪಾಯಿಂಟ್ ಆಫ್ ಇನ್‌ಫರ್‌ಮೇಷನ್ ಆ ರೀತಿ ಮಾಡಬಾರದು ಎಂಬುದಾಗಿ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿ ಹೇಳಿದೆ ?

ಶ್ರೀ ಜೆ. ಬಿ. ಮರ್ಲಾರಾಧ್ಯ.— ನೀವು ಇಲ್ಲಿ ಮಾತನಾಡುವುದೆಲ್ಲಾ ಅದರಲ್ಲಿ ಎಲ್ಲಿದೆ ?

ಶ್ರೀ ಜಿ. ಎ. ಅಂಜನಪ್ಪ.—ಹಿಂದೆಯೇ ಸಭಾಪತಿಗಳು ಇದರ ಬಗ್ಗೆ ಒಂದುಸಾರಿ ಇಲ್ಲಿ ರೂಲಿಂಗ್ ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ. ಅದನ್ನೂ ಮುಂದೆ ವಿಚಾರಮಾಡ್ತೇವೆ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಇವರು ಇಲ್ಲಿ ಈ ರೀತಿ ಮಾತನಾಡುವಾಗ ಈ ಸಭೆಯಲ್ಲಿ ಇದುವರೆಗೆ ಯಾರೂ ರಾಜ್ಯಪಾಲರ ಭಾಷಣದ ಬಗ್ಗೆ ಒಂದು ತಿದ್ದುಪಡಿಯನ್ನು ಕಳುಹಿಸಲಿಲ್ಲ. ಏತಕ್ಕೋಸ್ಕರ ಕಳುಹಿಸಲಿಲ್ಲ ?

ಶ್ರೀ ಕೆ. ಟಿ. ಶಾಮಯ್ಯಗೌಡ.—ನಾನು ಆ ದಿವಸ ನಡೆದ ಘಟನೆಯ ವಿಷಯವಾಗಿ ಹೇಳುತ್ತೇನೆ. ನಮ್ಮ ದೇಶದ ಮೊದಲನೆಯ ಅಂತಸ್ತಿನ ಅಧಿಕಾರ ಪಡೆದ ಮುಖಂಡರು ಅಂದರೆ ರಾಜ್ಯಪಾಲರು ಭಾಷಣ ಮಾಡುವಾಗ ವಿರೋಧಪಕ್ಷದವರು ಸಭಾತ್ಯಾಗ ಮಾಡಿದ್ದು ನಮ್ಮ ಭಾರತದ ಸಂಸ್ಕೃತಿಗೆ ಹಾಗೂ ಪ್ರಜಾಪ್ರಭುತ್ವ ನೀತಿಗೆ ವಿರೋಧವಾದುದಾಗಿದೆ. ಇನ್ನುಮುಂದೆ ವಿರೋಧಪಕ್ಷದವರು ಆರೀತಿ ಮಾಡಕೂಡದು ಎಂಬುದಾಗಿ ನಾನು ಅವರನ್ನು ಕೇಳುತ್ತಿದ್ದೇನೆ. ಅವರು ದಾರಿ ಹೇಳಿಕೊಡುವುದು ಆಡಳಿತಪಕ್ಷದವರಾದ ನಾವು ಕಲಿಯುವ ಹಾಗೆ ಇರಬೇಕು. ಅದಿಲ್ಲದೆ ಅವರೇ ಅಡ್ಡದಾರಿ ಹೋದಾಗ ಮುಂದೆ ಅಕಸ್ಮಾತ್ ಅವರದೇ ಆಡಳಿತ ಬಂದಾಗ್ಗೆ ಅವರ ಗತಿ ಏನಾಗುತ್ತದೆ ಎಂಬುದನ್ನು ನಾವು ಈಗ ಯೋಚನೆಮಾಡಬೇಕಾಗಿದೆ.

ಶ್ರೀ ಜಿ. ಎ.. ಅಂಜನಪ್ಪ.—ನಾವೇನೂ ಅಡ್ಡದಾರಿ ಹೋಗುವುದಿಲ್ಲ. ಸರಿಯಾದ ದಾರಿ ಯಲ್ಲಿಯೇ ಹೋಗುತ್ತೇವೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಅದನ್ನು ದೇಶದ ಜನತೆ ಮುಂದೆ ತಿಳಿದುಕೊಳ್ಳುತ್ತಾರೆ.

ಇನ್ನು ರಾಜ್ಯಪಾಲರು ನಮ್ಮ ದೇಶದಲ್ಲಿ ಆಗಿಹೋಗಿರತಕ್ಕ ವಿಷಯಗಳನ್ನೂ ಮತ್ತು ಮುಂದೆ ಆಗತಕ್ಕ ವಿಷಯಗಳನ್ನೂ ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ಆದರೆ ಆಡಳಿತ ನಡೆಸುವಾಗ ಅನೇಕ ಲೋಪದೋಷಗಳು ಇರಬಹುದು. ಅಂತಹುಗಳನ್ನು ವಿರೋಧಪಕ್ಷದವರು ತೋರಿಸಿಕೊಟ್ಟು ಸರಿಪಡಿಸುವುದಕ್ಕೆ ತಕ್ಕ ಮಾರ್ಗಗಳನ್ನು ಹೇಳಿದ್ದರೆ ಬಹಳ ಚೆನ್ನಾಗಿತ್ತು. ಆದರೆ ಎಲ್ಲಾ ಸಮಯದಲ್ಲಿಯೂ ಕಾಂಗ್ರೆಸ್ಸನ್ನು ಏನಾದರೂ ಮಾಡಿ ಉರುಳಿಸಬೇಕು ಎಂಬುದೇ ನಮ್ಮ ಕರ್ತವ್ಯವೆಂದು ವಿರೋಧಪಕ್ಷದವರು ಮಾಡುವುದಾದರೆ ಪ್ರಜಾಪ್ರಭುತ್ವ ಹೇಗೆ ಮುಂದೆ ನಡೆಯುತ್ತದೆಂಬುದು ನನಗೆ ಸಂಶಯವಾಗಿದೆ. ಏತಕ್ಕೆಂದರೆ ಪ್ರಜಾಭುತ್ವ ನೀತಿಯಲ್ಲಿ ಎರಡು ಪಕ್ಷಗಳು ಇರಬೇಕು ಎಂಬುದು ಎಲ್ಲರಿಗೂ ಗೊತ್ತಿದೆ. ಭಾರತ ದೇಶದಲ್ಲಿ ಮೂರು ನಾಲ್ಕು ಪ್ರಾಂತಗಳಲ್ಲಿ ವಿರೋಧ ಪಕ್ಷದವರ ಅಧಿಕಾರ ಯಾವ ಮಟ್ಟಕ್ಕೆ ಬಂದಿದೆ ಎಂಬುದನ್ನು ನೋಡಿದರೆ ನಮಗೆ ಹೆದರಿಕೆಯಾಗುತ್ತದೆ. ವಿರೋಧಪಕ್ಷದಲ್ಲಿ ಬಹುಮತವನ್ನು ಜನತೆ ಮಾಡಿಕೊಟ್ಟರೂ ಅದನ್ನು ಸರಿಯಾಗಿ ಇಟ್ಟುಕೊಳ್ಳುವುದಕ್ಕಾಗಲಲ್ಲವೆಂದಾ ಎಂದು ಮುಂದೆ ಕಾಂಗ್ರೆಸ್ ಮತ್ತು ಜನತೆ ಬಹಳವಾಗಿ ಯೋಚನೆ ಮಾಡಬೇಕಾಗಿದೆ. ವಿರೋಧ ಪಕ್ಷದವರಿಗೆ ಆ ಶಕ್ತಿಯೇ ಇಲ್ಲವೆಂದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಮೈಸೂರು ದೇಶದ ವಿರೋಧಪಕ್ಷದವರು ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಿ ಮುಂದುವರಿಯಬೇಕೆಂದು ನಾನು ವಿರೋಧ ಪಕ್ಷದವರನ್ನು ಸವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

(ಶ್ರೀ ಕೆ. ಟಿ. ಶಾಮಯ್ಯ ಗೌಡ)

4-45 P.M.

ಇನ್ನು ಇತ್ತೀಚೆಗೆ ನಮ್ಮ ದೇಶದಲ್ಲಿ ಅನೇಕ ಘಟನೆಗಳು ನಡೆದು ಸಂಪೂರ್ಣವಾಗಿ ಅಶಾಂತಿ ಉಂಟಾಯಿತು. ತ್ರಿಭಾಷಾ ಸೂತ್ರದ ಬಗ್ಗೆ ವಿದ್ಯಾರ್ಥಿಗಳ ಮುಷ್ಕರವಾಯಿತು. ಹೀಗೆ ಇನ್ನೂ ಅನೇಕ ತರಹ ಬೇರೆ ಬೇರೆ ಘಟನೆಗಳೆಲ್ಲ ಸೇರಿ ಈ ದೇಶದಲ್ಲಿ ಹೆಚ್ಚು ಗಲಭೆಗೆ ಅವಕಾಶವಾಯಿತು. ರಾ ಅಂಡ್ ಆರ್ಡರ್ ಕಾನೂನುಗಳನ್ನು ಪರಿಪಾಲನೆ ಮಾಡುವುದೇ ಕಷ್ಟವಾಯಿತು. ಆದರೂ ವಿರೋಧಪಕ್ಷದವರು ಪೋಲೀಸಿನವರ ಕ್ರಮ ಬಹಳ ಜಾಸ್ತಿಯಾಯಿತು, ಸ್ವಲ್ಪ ಮಟ್ಟಿಗೆ ಅವರ ಪ್ರಚೋದನೆಯೂ ಸಹ ಆಯಿತು ಎಂಬುದಾಗಿ ಹೇಳಿದರು. ನಾನು ಈ ವಿಚಾರದಲ್ಲಿ ಹೇಳುವುದಾದರೆ ಈ ದೇಶದಲ್ಲಿ ಅಷ್ಟರಮಟ್ಟಿಗೆ ರಾ ಅಂಡ್ ಆರ್ಡರ್ ಇಲ್ಲದೇ ಹೋಗಿದ್ದರೆ, ಮತ್ತು ನಮ್ಮ ಪೋಲೀಸಿನವರು ಇಂತಹ ಸಂದರ್ಭಗಳಲ್ಲಿ ಕೈಹಾಕದೇ ಹೋಗಿದ್ದರೆ, ಇರತಕ್ಕ ರಾ ಅಂಡ್ ಆರ್ಡರ್ ಯಾವ ಮಟ್ಟಕ್ಕೆ ಬರುತ್ತಿತ್ತೋ ಎಂದು ನಾವು ಯೋಚನೆ ಮಾಡಬೇಕಾಗಿದೆ. ಏನಾದರೂ ಪೋಲೀಸರು ಕ್ರಮ ತೆಗೆದುಕೊಂಡರೆ ಪೋಲೀಸ್ ರಾಜ್ಯ ಗೂಂಡಾಯಿಜಂ ಎಂದು ಹೇಳುತ್ತಾರೆ.

ಶ್ರೀ ಜಿ. ವಿ. ಆಂಜನಪ್ಪ.—ಅದನ್ನು ಹೇಳಿದ್ದು ನಾವಲ್ಲ. ನಿಮ್ಮ ಬೆಂಗಳೂರು ಯೂನಿವರ್ಸಿಟಿ ವೈಸ್ ಚಾನ್ಸಲರ್ ಅವರೇ ಹೇಳಿದ್ದಾರೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಬೆಂಗಳೂರು ಯೂನಿವರ್ಸಿಟಿ ವೈಸ್ ಚಾನ್ಸಲರ್ ಅವರು ಆ ರೀತಿ ಹೇಳಿದ್ದರೆ, ಅದನ್ನು ಸರ್ಕಾರದವರು ವಿಚಾರ ಮಾಡುತ್ತಾರೆ. ನಾವು ಅವರಿಗೆ ಆ ವಿಷಯದಲ್ಲಿ ಎಚ್ಚರಿಕೆ ಕೊಡುವುದು ಬೇಕಿಲ್ಲ. ಅವರು ಯಾವ ಕಾರಣದಿಂದ ಹೇಳಿದರೋ ಏತಕ್ಕಾಗಿ ಹೇಳಿದರೋ ಆ ವಿಚಾರ ನಮಗೆ ಗೊತ್ತಿಲ್ಲ. ಇಂತಹ ಸಂದರ್ಭಗಳಲ್ಲಿ ಆದರಲ್ಲೂ ಈ ದೇಶದ ಆಸ್ತಿಗೆ ಹಾನಿಯಾಗುವಾಗ, ವಿರೋಧಪಕ್ಷದಲ್ಲಿರುವವರೆಲ್ಲರೂ ಜನತೆಯ ಕ್ಷೇಮ, ದೇಶದ ಕ್ಷೇಮ ಹಾಗೂ ರಾಷ್ಟ್ರೀಯ ಐಕ್ಯತೆಗೆ ನಿಜವಾಗಿ ಸಹಾಯ ಮಾಡಬೇಕು. ಇಂಥಾದ್ದನ್ನು ಮಾಡದೆ ವಿರೋಧಪಕ್ಷದವರು ಯಾವುದೋ ಒಂದು ಆಧಾರವಾಗಿಟ್ಟುಕೊಂಡು ಈ ಸಭೆಯಲ್ಲಿ ಈ ರೀತಿಯಾಗಿ ಸುಮ್ಮನೆ ಹೇಳುತ್ತಾ ಹೋದರೆ ಈ ದೇಶದಲ್ಲಿ ಇನ್ನೂ ಹೆಚ್ಚಿಗೆ ಅಶಾಂತಿ ನೆಲೆಸೀತೆಂದು ನಾನು ಹೇಳುತ್ತೇನೆ.

ಸ್ವಲ್ಪ ಯೋಚನೆ ಮಾಡಿ ಆ ಗಲಾಟೆಯನ್ನು ಅಡಗಿಸುವುದಕ್ಕೆ ಸಹಾಯ ಮಾಡಬೇಕೇ ಹೊರತು ಅದನ್ನೇ ದೊಡ್ಡದು ಮಾಡಿಕೊಂಡು ಹೆಚ್ಚಿಗೆ ಉತ್ಪ್ರೇಕ್ಷೆ ಮಾಡಿ ಮಾತನಾಡುವುದು ಬೇಡ. ತ್ರಿಭಾಷಾ ಸೂತ್ರದಲ್ಲಿ ವಿದ್ಯಾರ್ಥಿಗಳು ಮುಂದುವರಿಯುವುದು ನಿಜ. ಕೇಂದ್ರದಲ್ಲಿ ಈ ಭಾಷೆಯ ಬಗ್ಗೆ ಒಂದು ನಿರ್ಣಯ ಆದನಂತರ ಅದರಿಂದ ಇಂಬ್ಯಾರೆನ್ಸ್ ಉಂಟಾಗಿ ಸೈಕ್ಲಿಕ್ ಕ್ರಮ ತೆಗೆದುಕೊಂಡರು. ಆದರೆ ಅದನ್ನು ಹೊರಗಡೆಯಿಂದ ಬಂದಂಥ ಕೆಲವರು ಉತ್ಪ್ರೇಕ್ಷೆ ಮಾಡಿ ಹೆಚ್ಚಿಗೆ ಸಹಾಯ ಕೊಟ್ಟು ದೇಶದಲ್ಲಿ ಅಶಾಂತಿಯನ್ನುಂಟುಮಾಡುವುದಕ್ಕೆ ಬೇಕಾದಷ್ಟು ಮಾಡಿದರು. ಶಿವಮೊಗ್ಗಾದಲ್ಲಿ ಗೊತ್ತಿದೆ. ಮದ್ರಾಸಿನಿಂದ ಎಷ್ಟೋ ಕಾರು ಬಂದಿದ್ದವು, ಕಾರಿನಲ್ಲಿ ಬಂದವರು ನಮ್ಮ ವಿದ್ಯಾರ್ಥಿಗಳಿಗೆ ಪ್ರಚೋದನೆ ಮಾಡಿದ್ದಾರೆ. ಆ ಕಾರುಗಳ ನಂಬರುಗಳನ್ನು ಸರ್ಕಾರದವರು ನೋಟ್ ಮಾಡಿಕೊಂಡಿದ್ದಾರೆ. ಹೊರಗಿನವರ ಸಹಾಯವಿಲ್ಲದೆ ಇಷ್ಟು ಆಗಲಕ್ಕೆ ಕಾರಣ ಇರಲಿಲ್ಲ. ಇನ್ನು ಮುಂದೆ ಸರ್ಕಾರದವರು ನಿಗಾ ಇಟ್ಟು ಅಂಥಾ ಮುಷ್ಕರಗಳು ಬಾರದಂತೆ, ನಮ್ಮ ದೇಶದ ಆಸ್ತಿಗಳಿಗೆ ಹಾನಿ ಆಗದಂತೆ ನೋಡಿಕೊಳ್ಳಬೇಕು ಎಂದು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು 1967-68ನೇ ಸಾಲಿನಲ್ಲಿ ನಮ್ಮ ಪಂಚವಾರ್ಷಿಕ ಯೋಜನೆಗೆ 60 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಇಟ್ಟುಕೊಂಡಿದ್ದರು. ಆ ಯೋಜನೆಯಲ್ಲಿ ಅನೇಕ ಯೋಜನೆಗಳ ಫಲತಾಂಶ ಉಪಯುಕ್ತವಾಗದೇ ಇರಬಹುದು. ಅಂಥವುಗಳನ್ನು ನಾವು ಕೈಬಿಟ್ಟು ದೇಶದ ಏಳಿಗೆಗೆ ಅಭಿವೃದ್ಧಿಗೆ ಯಾವುದು ಮುಖ್ಯವೋ ಅದನ್ನು ತೆಗೆದುಕೊಳ್ಳುವುದು ಒಳ್ಳೆಯದು. ರಾಜ್ಯಪಾಲರ ಭಾಷಣದಲ್ಲಿ ಪಂಚವಾರ್ಷಿಕ ಯೋಜನೆ ಮತ್ತು ಈ ವರ್ಷದ ಯೋಜನೆಯ ವಿಷಯವನ್ನೂ ಮಾತನಾಡಿದ್ದಾರೆ. ಹಣದ ಮುಗ್ಗಟ್ಟು ಯೋಜನೆಯ ಮುಖಾಂತರ ಬರಬಹುದು, ಆದರೆ ಇನ್ನು ಮುಂದೆ ದೇಶದಲ್ಲಿ ಯಾವ ತರಹ ತೆರಿಗೆಯನ್ನು ಹಾಕಿದರೂ ಕೊಡತಕ್ಕ ಸಂದರ್ಭ ಬಹಳ ಕಷ್ಟವಾಗಿದೆ. ಆದ್ದರಿಂದ ಹಾಗೆ ಮಾಡದೆ ಈಗ ಏನು ಖರ್ಚು ಮಾಡುತ್ತಿದ್ದಾರೆ ಅದರಲ್ಲಿ ಖೋತಾ ಮಾಡಿ ಯಾವ ಯಾವ ಇಲಾಖೆಯಲ್ಲಿ, ಯಾವು ಯಾವುದು ಉಪಯುಕ್ತ ಇಲ್ಲವೋ ಅಂಥಾದ್ದನ್ನು ನಿಲ್ಲಿಸಿ ಖರ್ಚನ್ನು ಕಡಿಮೆ ಮಾಡಿದರೆ ಸಾಧ್ಯವೇ ಹೊರತು, ಹೆಚ್ಚು ತೆರಿಗೆಯನ್ನು ಹಾಕಿ ಯೋಜನೆಯನ್ನು ಮುಂದುವರಿಸುತ್ತೇವೆ ಎಂದು ಹೇಳುವುದು ಉಪಯುಕ್ತವಲ್ಲ. ಸರ್ಕಾರದವರು ಆದರಲ್ಲಿ ಹೆಚ್ಚಿನ ಗಮನ ಕೊಡಬೇಕು ಎಂದು ನಾನು ಹೇಳುತ್ತೇನೆ. ಅಮೆರಿಕಾದೇಶದಲ್ಲಿ ಒಂದು ವಿಷಯದಲ್ಲಿ ತೆರಿಗೆ ಹಾಕಿ

ಅದನ್ನು ಸೆನೆಟ್ ಮುಂದೆ ಇಟ್ಟಾಗ ಅವರು ಹೇಳಿದರು, ಈ ತೆರಿಗೆಯನ್ನು ಒಪ್ಪಬೇಕಾದರೆ ಸರ್ಕಾರ ದವರು ಎಷ್ಟು ಖೋತಾ ಮಾಡುತ್ತಾರೆಂಬುದನ್ನು ತೋರಿಸಿದರೆ ಮಾತ್ರ ಇದನ್ನು ಒಪ್ಪತಕ್ಕ ವಿಚಾರ ದಲ್ಲಿ ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಇನ್ನು ಮುಂದೆ ಸರ್ಕಾರ ತೆರಿಗೆಯನ್ನು ಹಾಕಿದರೆ ನಾವೂ ಸ್ವಲ್ಪ ಹಾಗೆ ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಈಗಲೇ ತೆರಿಗೆ ವಿಚಾರದಲ್ಲಿ ಸರ್ಕಾರಕ್ಕೆ ಎಚ್ಚರಿಕೆ ಹೇಳಬೇಕಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಯಾವುದರಲ್ಲಿ ಖೋತಾ ಮಾಡಬೇಕೆಂಬುದನ್ನು ಹೇಳಿ.

ಶ್ರೀ ಕೆ. ಟಿ. ಶಾಮಯ್ಯಗೌಡ.—ನಾನಾ ಕಡೆ ಖೋತಾ ಮಾಡುವ ವಿಚಾರ ಇದೆ.

ಇನ್ನು ಆಹಾರದ ವಿಚಾರದಲ್ಲಿ ನಾಲ್ಕು ಮಾತು ಹೇಳಬೇಕಾಗುತ್ತದೆ. ದೇಶದಲ್ಲಿ ಆಹಾರದ ಕೊರತೆ ಇದೆ. ಆದರೆ ನಮ್ಮ ಇಂಟರ್ ಸ್ಟೇಟ್ ಕಂಟ್ರೋಲ್ ಅಲ್ಲದೇ ಇದ್ದರೂ, ಸ್ಟೇಟಿನೊಳಗೆ ಕಂಟ್ರೋಲ್ ತೆಗೆದಿದ್ದರೆ ಆಹಾರದ ಅಭಾವವಾಗಲಿ ಇಷ್ಟರಮಟ್ಟಿಗೆ ಬ್ಲಾಕ್ ಮಾರ್ಕೆಟಿಯರ್ಸ್ ಗಾಗಲೀ, ಸ್ಮಗ್ಲರ್ಸ್‌ಗಾಗಲೀ ಅವಕಾಶವಾಗುತ್ತಾ ಇರಲಿಲ್ಲ. ನಮ್ಮ ಮೈಸೂರು ದೇಶದೊಳಗೇ ಕಂಟ್ರೋಲ್ ತೆಗೆಯದೇ ಹೋದರೆ ಬ್ಲಾಕ್ ಮಾರ್ಕೆಟಿಯರುಗಳಿಗೆ, ಸ್ಮಗ್ಲರುಗಳಿಗೆ ಬಹಳ ಅನುಕೂಲವಾಗುತ್ತದೆ. ಅವರು ಸಂಪಾದನೆಮಾಡುತ್ತಾರೆಯೇ ಹೊರತು ಕಷ್ಟದಿಂದ ಬೆಳೆದಂಥ ರೈತ ಮಾಲನ್ನು ಕಡಿಮೆ ಬೆಲೆಗೆ ಮಾರುವ ಸಂಪ್ರದಾಯ ಬಂದಿದೆ. ಅದನ್ನು ಸರ್ಕಾರದವರು ಯೋಚನೆಮಾಡಿ ಮೈಸೂರು ದೇಶದೊಳಗೇ ಜಿಲ್ಲಾ ಮಟ್ಟದಲ್ಲಿರುವ ಕಂಟ್ರೋಲನ್ನು ಅದಷ್ಟು ಜಾಗ್ರತೆ ತೆಗೆಯುವುದು ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ಇದನ್ನು ಸರ್ಕಾರ ದವರು ತೀವ್ರವಾಗಿ ಯೋಚನೆ ಮಾಡಬೇಕು. ಶಿವಮೊಗ್ಗಾದಲ್ಲಿ ಈಗ ಬೆಲೆ ಕಡಿಮೆಯಾಗಿದೆ. ಬತ್ತದ ಬೆಲೆ ಕಡಿಮೆಯಾಗಿದೆ. ಬೆಂಗಳೂರು, ಕೋರಾರದಲ್ಲಿ ಬತ್ತದ ಬೆಲೆ ಜಾಸ್ತಿಯಾಗಿದೆ. ಕೆಲವು ವರ್ತಕರು ಒಂದು ಫರ್ಮಿಟ್ ತೆಗೆದುಕೊಂಡು ಲಂಚ ಕೊಟ್ಟು ಅದನ್ನೆ ಹತ್ತಾರು ಸಾರಿ ಉಪಯೋಗ ಮಾಡುತ್ತಿದ್ದಾರೆ ಅದರಿಂದ ಲಾಭವನ್ನು ಸಂಪಾದನೆ ಮಾಡುತ್ತಿದ್ದಾರೆ. ನಮ್ಮ ದೇಶದ ಒಳಗೇ ಇರತಕ್ಕ ಕಂಟ್ರೋಲನ್ನು ತೆಗೆದರೆ ಇಷ್ಟು ಬೆಲೆ ಮತ್ತು ಅಭಾವ ಉಂಟಾಗುವುದಕ್ಕೆ ಅವಕಾಶವಿರುವುದಿಲ್ಲ ಎಂದು ನನಗೆ ಚೆನ್ನಾಗಿ ತಿಳಿದಿದೆ. ಆದ್ದರಿಂದ ಸರ್ಕಾರದವರು ಪ್ರಯತ್ನ ಮಾಡಿ ಅದಷ್ಟು ಜಾಗ್ರತೆ ನಮ್ಮ ದೇಶದೊಳಗೆ ಜಿಲ್ಲೆಯೊಳಗಿರತಕ್ಕ ಕಂಟ್ರೋಲನ್ನು ತೆಗೆಯ ಬೇಕೆಂದು ನಾನು ಹೇಳುತ್ತೇನೆ. ಈಗ ಶಿವಮೊಗ್ಗಾ ಜಿಲ್ಲೆಯಿಂದ ಬತ್ತ ಹೊರಗೆ ಹೋಗಕೂಡದು ಎಂದು ಇದೆ. ಈಚೆಗೆ ನಾನು ಕೇಳಿದ್ದರಲ್ಲಿ, ನೋಡಿದ್ದರಲ್ಲಿ ನಮ್ಮ ಅನುಭವಕ್ಕೆ ಬಂದಿರುವ ರೀತಿಯಲ್ಲಿ ಫಾಟ್‌ಗಳಲ್ಲಿ 30-40 ಲಾರಿ ಬತ್ತ ನಮ್ಮ ಶಿವಮೊಗ್ಗದಿಂದ ಸೌತ್ ಕೆನರಾಕ್ಕೆ ಹೋಗುತ್ತದೆ. ಒಂದು ಲಾರಿ ಹೋದರೆ 2-3 ಸಾವಿರ ರೂಪಾಯಿಗಳ ಲಾಭ ಇದೆ. ಯಾವ ಕಡೆಯಲ್ಲ ರಿಜರ್ವ್ ಪೋಲೀಸ್‌ನವರನ್ನು ಇಟ್ಟಿರುತ್ತಾರೆಯೋ ಅಂಥಾ ಕಡೆ ಅವರು ಒಂದು ಆಶೆಗೆ ಒಳಗಾಗಿ ಲಾರಿಯನ್ನು ಬಿಡುವುದಕ್ಕೆ ಅವಕಾಶವಾಗುತ್ತಿದೆ. ಇದರಿಂದಾಗಿ ಬ್ಲಾಕ್ ಮಾರ್ಕೆಟಿಯರ್ಸ್‌ಗೆ, ಸ್ಮಗ್ಲರ್ಸಿಗೆ ಅನುಕೂಲವಾಗುತ್ತಿದೆ. ಬೆಳದ ರೈತ ಮಾಲನ್ನು ಮಾರಾಟ ಮಾಡಿದರೆ ಅದರಿಂದ ಅವನಿಗೆ ಲಾಭ ಬರುತ್ತದೆ. ಅಂಥವನಿಗೆ ಆನ್ವದ ಇಲ್ಲದೆ ಕಂಟ್ರೋಲ್ ಇಟ್ಟು ಜಿಲ್ಲೆಯಿಂದ ಜಿಲ್ಲೆಗೆ ಹೋಗಕೂಡದು ಎಂದು ಮಾಡಿರುವುದರಿಂದ ಅವನಿಗೆ ಯಾವ ಪ್ರಯೋಜನವೂ ಆಗುತ್ತಾ ಇಲ್ಲ ಎಂದು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಶಿವಮೊಗ್ಗಾದಿಂದ ಒಂದು ದಿವಸಕ್ಕೆ 30-40 ಲಾರಿ ಬತ್ತ ಹೊರಗಡೆ ಹೋಗುತ್ತಿದೆ ಎಂದು ನಾನು ಸರ್ಕಾರಕ್ಕೆ ಸಲಹೆ ಕೊಟ್ಟಿದ್ದೇನೆ. ಹಾಗೆ ಹೋಗುವ ಲಾರಿಯನ್ನು ಹಿಡಿದರೂ ಅದರಲ್ಲಿ ಫರ್ಮಿಟ್ ಇರುತ್ತದೆ. ಒಂದೇ ಫರ್ಮಿಟ್‌ನಲ್ಲಿ 10–12 ಸಾರಿ ಹೋಗುತ್ತಾರೆ. ಲಾರಿಯಲ್ಲಿ ಹೋಗುವಂತಹ ಬತ್ತ ಯಾವ ಸ್ಥಳವನ್ನು ಮುಟ್ಟುತ್ತದೆಯೋ ಅವರಿಂದ ಒಂದು ರಸೀತಿಯನ್ನು ತರುವಂತೆ ಕಟ್ಟುನಿಟ್ಟಾಗಿ ಒಂದು ಏರ್ಪಾಟಿಯನ್ನು ಮಾಡಿದರೆ ಆಗುತ್ತದೆ. ಮತ್ತು ಲಾರಿಯಲ್ಲಿ ಹೋಗುವಂತಹ ಆಹಾರ ಪದಾರ್ಥ ಯಾವ ಡೆಸ್ಟಿನೇಷನ್ ಮುಟ್ಟುತ್ತದೆ, ಯಾವ ರೀತಿ ವಿನಿಯೋಗವಾಗುತ್ತದೆ ಎಂಬುದನ್ನು ಲಾರಿ ಯವರು ರುಜುವಾತು ತಂದು ಕೊಡಬೇಕು. ಆ ರೀತಿ ಅವರು ತಂದು ಕೊಟ್ಟರೆ ಮಾತ್ರ ಅದನ್ನು ಕಂಡುಹಿಡಿಯುವುದಕ್ಕೆ ಆಗುತ್ತದೆ. ಇಲ್ಲದೇ ಹೋದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಈಗ ಶಿವಮೊಗ್ಗಾದಿಂದ ಬತ್ತ ಸೌತ್ ಕೆನರಾ ಮತ್ತು ಕೇರಳಕ್ಕೆ ಹೋಗುತ್ತಿದೆ. ನಮ್ಮ ದೇಶದಿಂದ ಹೊರಗಡೆ ಬೇರೆ ಬೇರೆ ಕಡೆಗಳಿಗೂ ಹೋಗುತ್ತದೆಯೆಂದು ಅನೇಕರು ಹೇಳುತ್ತಾರೆ. ಅಂತೂ ಮೈಸೂರು ದೇಶದ ಒಳಗಡೆ, ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಸಾಗಿಸುವುದಕ್ಕೆ ಇರತಕ್ಕ ಕಂಟ್ರೋಲ್ ಪದ್ಧತಿಯನ್ನು ತೆಗೆದರೆ ಒಳ್ಳೆಯದು ಎಂದು ನಾನು ಹೇಳಬೇಕಾಗಿದೆ. ಆಮೇಲೆ ಮೂವ್‌ಮೆಂಟಿನ ಕಂಟ್ರೋಲ್ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಸರ್ಕಾರದವರು ಆಹಾರ ಧಾನ್ಯವನ್ನು ನಿಯಮಿತ ಮಾರುಕಟ್ಟೆಗಳಲ್ಲಿ ಕೊಳ್ಳುವುದಕ್ಕೆ ಸಂಬಂಧಿಸಿದ

(ಶ್ರೀ ಕೆ. ಟಿ. ಶಾಮಯ್ಯ ಗೌಡ)

1967ನೆಯ ಇನಮಿಯ ಆದೇಶವನ್ನು ಹೊರಡಿಸಿದ್ದಾರೆ. ಈ ಆದೇಶದ ಪ್ರಕಾರ ಆಹಾರ ಧಾನ್ಯಗಳನ್ನು ನಿಯಮಿತ ಮಾರುಕಟ್ಟೆಗಳಿಂದ ಸರ್ಕಾರದ ಅಧಿಕೃತ ಏಜೆಂಟರುಗಳ ಮೂಲಕ ಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಈಗ ಸರ್ಕಾರದವರು ಲೆವಿ ಸಿಸ್ಟಮ್‌ನಲ್ಲಿ ಆಹಾರ ಧಾನ್ಯವನ್ನು ಕೊಂಡುಕೊಳ್ಳುತ್ತಾರೆ. ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳುವುದಿಲ್ಲ. ನಿಯಮಿತ ಮಾರುಕಟ್ಟೆಗಳಿಂದ ಸರ್ಕಾರದ ಅಧಿಕೃತ ಏಜೆಂಟರುಗಳ ಮೂಲಕ ಕೊಳ್ಳುವುದು ಫುಡ್ ಕಾರ್ಪೋರೇಷನ್‌ನವರು ನಮ್ಮ ಸರ್ಕಾರದವರು ಲೆವಿ ಸಿಸ್ಟಂ ಪ್ರಕಾರ ಮಾತ್ರ ಕೊಂಡುಕೊಳ್ಳುತ್ತಾರೆ. ಆದ್ದರಿಂದ ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕದ್ದನ್ನು ಸ್ವಲ್ಪ ಉತ್ತರ ಕೊಡುವಾಗ ಏವರಣೆ ಕೊಡಬೇಕೆಂದು ನಾನು ಹೇಳುತ್ತೇನೆ.

ಆಮೇಲೆ ಅತ್ಯವಶ್ಯ ಸರಕುಗಳ ಮತ್ತು, ಬೇರೆ ಆಹಾರ ವಸ್ತುಗಳ ಬೆಲೆಗಳ ಏರಿಳಿತಗಳನ್ನು ಗಮನಿಸುವ ನಿಯಿತ್ತವಾಗಿಯೂ, ವ್ಯಾಪಾರಿಗಳ, ರಾಭಕೋರರ ಪ್ರವೃತ್ತಿಯನ್ನು ತಡೆಗಟ್ಟುವ ಸಲುವಾಗಿಯೂ ಹತ್ತಿ ಬಟ್ಟೆ, ಶಿಶುಗಳ ಆಹಾರ, ಖಾದ್ಯ ತೈಲ, ವನಸ್ಪತಿ ಮತ್ತು ಬೇರೆ ಕೆಲವಾರು ಅತ್ಯವಶ್ಯ ಸರಕುಗಳನ್ನು ನ್ಯಾಯವಾದ ಬೆಲೆಗೆ ಮಾರುವಂತೆ ವ್ಯಾಪಾರಿಗಳಿಗೆ ಆದೇಶ ನೀಡಲಾಗಿದೆ, ಎಂದು ಹೇಳಿದ್ದಾರೆ. ವ್ಯಾಪಾರಗಾರರು ಕೂತಿರುವುದು ರಾಭಕಕ್ಕಾಗಿ. ಇಂಥಾ ಆದೇಶದ ಪ್ರಕಾರ ಅವರು ವ್ಯಾಪಾರವಾಡುವುದಾದರೆ ಅವರು ವ್ಯಾಪಾರವನ್ನು ಏತಕ್ಕೆ ಮಾಡಬೇಕು? ಆದ್ದರಿಂದ ಇಂಥಾ ಆದೇಶಗಳು ನರಿಹೋಗುವುದಿಲ್ಲ. ಈಗ ಪದಾರ್ಥಗಳ ಬೆಲೆಗಳು ಕಡಿಮೆಯಾಗಿವೆ. ಒಂದೊಂದೂ ಇಳಿಯುತ್ತಿವೆ. ಇನ್ನು ಏರಡು ಮೂರು ತಿಂಗಳುಗಳ ಮೇಲೆ ಸ್ವಲ್ಪ ಏರಲೂ ಬಹುದು. ಆದರೂ ಸರ್ಕಾರದವರು ಏನು ಬಫರ್ ಸ್ಟಾಕ್ ಕೊಂಡುಕೊಳ್ಳುತ್ತಾರೆ, ಅದನ್ನು ಅವರು ಕ್ರಮಪ್ರಕಾರವಾಗಿ ಹೆಚ್ಚು ಮಾಡಬೇಕು. ನಮ್ಮ ಮಲೆನಾಡಿನಲ್ಲಿ ರೇವಿ ಪದ್ಧತಿಯಲ್ಲಿ ಬಹಳ ತೊಂದರೆಯಾಗಿದೆ. ಈ ವರ್ಷ ಬೆಳೆ ಕಡಿಮೆಯಾಗಿದೆ. ಶ್ಯಾನುಭೋಗರಿಲ್ಲದೆ ಪಟ್ಟೇಲರಿಲ್ಲದೆ, ಪಹಣಿ ಬರೆಯಲಿಲ್ಲ. ಸುಮ್ಮನೆ ಹಿಂದಿನ ಲೆಕ್ಕ ನೋಡಿ ಆ ಪ್ರಕಾರವಾಗಿ ಸ್ವಲ್ಪ ಬರಾತ್ಕಾರವಾಗಿ ವಸೂಲು ಮಾಡುತ್ತಿದ್ದಾರೆ. ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇದನ್ನು ಸರಿಯಾದ ರೀತಿಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಉದ್ಯಮ ಸಂಸ್ಥೆಗಳ ವಿಚಾರ. ನಮ್ಮ ದೇಶದಲ್ಲಿ ಟೆಕ್ನಿಕಲ್ ಸ್ಕೂಲುಗಳು ಅನೇಕ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಇವೆ. ವಿದ್ಯಾರ್ಥಿಗಳು ಇನ್ನೂ ಸೇರುತ್ತಾ ಇದ್ದಾರೆ. ಒಂದು ಸಲ ನಾನು, ಹಿಂದೆ ಪಾಸ್ ಆದವರಿಗೆಲ್ಲಾ ಕೆಲಸ ಸಿಕ್ಕಿದೆಯೋ ಎಂದು ವಿಚಾರಿಸಿದರೆ, ಸುಮಾರು ಮೂರು ನಾಪರದಿಂದ, ನಾಲ್ಕು ನಾಪರದವರೆಗೆ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸು ಮಾಡಿದವರು ನಿರುದ್ಯೋಗಸ್ಥರಾಗಿ ಇದ್ದಾರೆ ಎಂದು ತಿಳಿದು ಬಂತು. ಸರ್ಕಾರದವರು ಇದಕ್ಕೆ ಏನಾದರೂ ಯೋಜನೆ ಮಾಡಿದ್ದಾರೆಯೇ? ಇನ್ನೂ ಇಂಥ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡುತ್ತಿದ್ದಾರೆ. ಇದರಿಂದ ಏನು ಪ್ರಯೋಜನ? ಹೋಗಲಿ, ಇಂಥ ಟೆಕ್ನಿಕಲ್ ಸ್ಕೂಲುಗಳಲ್ಲಿ ಪಾಸಾಗಿ ಬಂದ ವಿದ್ಯಾರ್ಥಿಗಳನ್ನು ಯಾವುದಾದರೂ ಹುದ್ದೆಗಳಿಗೆ ಸೇರಿಸೋಣ ಎಂದರೆ, ಅವರು ಯಾವುದಕ್ಕೂ ರಾಯಕ್ಕಿಲ್ಲ. ಅನೇಕರಿಗೆ ಆಟೋಮೊಬಾಯಿಲ್ ಡಿಪ್ಲೊಮಾ ಕೋರ್ಸ್ ಪಾಸ್ ಆದವರಿಗೆ ಕಾರ್ಬರೇಟರ್ ಬಿಚ್ಚುವುದಕ್ಕೆ ಬರುವುದಿಲ್ಲ. ಇಂಜಿನಿಯಲ್ಲಿ ಕಾರ್ಬರೇಟರ್ ಸಿಸ್ಟಮ್ಸ್, ಡಿಸಿಲ್ ಸಿಸ್ಟಮ್ಸ್ ಎಂಬುದು ಅವರಿಗೆ ಗೊತ್ತಾಗುವುದಿಲ್ಲ. ಅವರು ಹೇಗೆ ಪಾಸಾಗಿ ಬಂದರೋ, ಯಾವ ರೀತಿಯ ತರಬೇತಿ ಕೊಡುತ್ತಾರೋ ಗೊತ್ತಾಗಿಲ್ಲ. ಈ ರೀತಿ ಮಾಡಿದರೆ, ನಿಜವಾಗಿಯೂ ಅವರನ್ನು ಉದ್ಯೋಗಗಳಿಗೆ ತಯಾರು ಮಾಡಿದಂತಾಗುವುದಿಲ್ಲ. ನಿರುದ್ಯೋಗಗಳಾಗಿ ಒಂದು ಕಮ್ಯುನಿಸ್ಟ್ ಟೆಂಡೆನ್ಸಿ ಅವರಲ್ಲಿ ಉಂಟು ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಇನ್ನು ಮೇಲಾದರೂ ಅವರಿಂದ ಪ್ರಯೋಜನ ಪಡೆಯುವಂತೆ ಮಾಡದೆ ಹೋದರೆ, ಸರ್ಕಾರ ಮಾಡಿದ ಖರ್ಚು ವ್ಯರ್ಥವಾದಂತಾಗುತ್ತದೆ. ಇವತ್ತು ಡಿಪ್ಲೊಮಾ ಕೋರ್ಸು, ಸಿವಿಲ್ ಇಂಜಿನಿಯರಿಂಗ್ ಕೋರ್ಸು, ಮೆಕ್ಯಾನಿಕಲ್ ಕೋರ್ಸು ಮಾಡಿದವರು ಕೆಲಸ ಕೊಡಿ ಎಂದು ಬರುತ್ತಿದ್ದಾರೆ. ಆದರೆ ಯಾವುದಾದರೂ ಲೇತ್ ಹ್ಯಾಂಡ್ಲ್ ಮಾಡುವುದಕ್ಕೆ ಬರುತ್ತದೆಯೋ ಎಂದು ಕೇಳಿದರೆ, ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಮ್ಮ ದೇಶದಲ್ಲಿ ಯಾವ ಒಂದು ಟ್ರಾಕ್ಟರ್ ರಿಪೇರಿ, ಒಂದು ಮೇಶೀನ್ ರಿಪೇರಿ ಮಾಡಲೂ ಯಾರೂ ಸಿಗುವುದಿಲ್ಲ. ಪಂಪ್ ಯಾವುದಾದರೂ ಹಾಳಾದರೆ, ಅದನ್ನು ನಾವು ಬೆಂಗಳೂರಿಗೆ ತರಬೇಕಾಗುತ್ತದೆ. ಆದ್ದರಿಂದ ಇವತ್ತು ಅವರು ಯಾವ ಕೋರ್ಸುಗಳಲ್ಲಿ ಪಾಸಾದುದು? ಆದ್ದರಿಂದ ಸರ್ಕಾರದವರು ಇದನ್ನು ತೀವ್ರವಾಗಿ ಗಮನಿಸಬೇಕು. ಹಾಗೆ ಮಾಡುವುದು ಸಾಧ್ಯವಿಲ್ಲದೆ ಇದ್ದರೆ, ಅದನ್ನೆಲ್ಲಾ ಮುಚ್ಚುವುದು ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಒಬ್ಬ ಎಲೆಕ್ಟ್ರಿಕಲ್ ಕೋರ್ಸು ಆದವನನ್ನು ನಮ್ಮ ಹೆಚ್ಒಲ್ ಬಂಕಿಗೆ ಬಂದು ಕ್ಲಾರ್ಕ್ ಕೆಲಸವಾದರೂ ಕೊಡಿ ಎಂದು

ಕೇಳುತ್ತಿದ್ದಾರೆ. ಅಂದರೆ ಅವರ ಪರಿಸ್ಥಿತಿ ಯೋಚನೆ ಮಾಡಬೇಕು. ಆದ್ದರಿಂದ ನಿಜವಾಗಿಯೂ ನಿಮ್ಮ ಕೆಲಸಕ್ಕೆ ಏನು ಬೇಕು ಅಂಥದನ್ನು ಕಲಿಸಿಕೊಡಬೇಕು. ಮತ್ತು ಇಂಥ ಟೆಕ್ನಿಕಲ್ ಸ್ಕೂಲು ಗಳನ್ನು ಸ್ವಲ್ಪ ಕಡಿಮೆ ಮಾಡುವುದು ಒಳ್ಳೆಯದು.

ಇನ್ನು ವಿದ್ಯಾಭ್ಯಾಸದ ವಿಚಾರ. ಇಲ್ಲಿ ಯೂನಿವರ್ಸಿಟಿ ವಿಚಾರದಲ್ಲಿ ಬಹಳ ಚರ್ಚೆಯಾಯ್ತು ಆದರೆ ಯೂನಿವರ್ಸಿಟಿಗೆ ನಾವು ನಮ್ಮ ಪ್ರತಿನಿಧಿಗಳನ್ನು ಕಳಿಸಿ, ಅಲ್ಲದೆ ನಮ್ಮ ಸರ್ಕಾರದ ಹಣ ಕೊಡುತ್ತಾ ಇರುವಾಗ, ಅಲ್ಲಿ ಏನು ಅನೀತಿ ನಡೆದರೂ ನಾವು ಅದನ್ನು ಇಲ್ಲಿ ಮಾತನಾಡಕೂಡದು ಎಂದು ಹೇಳಿದರೆ, ಅದು ಸ್ವಲ್ಪ ಯೋಚನೆ ಮಾಡಬೇಕಾದ ವಿಚಾರ. ಅದನ್ನು ಇಲ್ಲಿ ಚರ್ಚೆ ಮಾಡಲು ಮತ್ತು ಸರ್ಕಾರದ ಗಮನಕ್ಕೆ ತರಲಿಕ್ಕೂ ಇಲ್ಲ ಎಂದರೆ ಅದು ಬಹಳ ಕಷ್ಟ. ಮತ್ತೆ ಕೆಲವರಿಂದ ನಾನು ಕೇಳಿದೆ ನೇಮಕದ ವಿಚಾರದಲ್ಲಿ ಬೋರ್ಡ್ ಆಫ್ ಎಕ್ಸ್‌ಪರ್ಟ್ ರಿಪೋರ್ಟು ಕೊಡುವುದು. ಸಿಂಡಿಕೇಟ್, ಸೆನೇಟಿಗೆ ಚರ್ಚೆಗೆ ಆಸ್ಪದವಿಲ್ಲ, ಅದು ಕಾನ್‌ಫಿಡೆನ್‌ಶಿಯಲ್ ರಿಪೋರ್ಟು ಎಂದು ತಿಳಿದು ಬಂದಿದೆ. ಅದು ಎಷ್ಟು ಕಾನ್‌ಫಿಡೆನ್‌ಶಿಯಲ್ ಆಗಿದ್ದರೂ ಕೇವಲ ವೈಸ್ ಚಾನ್ಸಲರ್ ತಮ್ಮ ಮನಸ್ಸಿಗೆ ಬಂದಹಾಗೆ ಮಾಡಿದರೆ, ಅಲ್ಲಿ ಏನಾದರೂ ಇರೆಗ್ಯುಲಾರಿಟಿ ಆದರೆ ಅದು ಚರ್ಚೆಗೆ ಬಾರದೆ ಇದ್ದರೆ, ಬಹಳ ತೊಂದರೆಯಾಗುತ್ತದೆ. ಅಲ್ಲಿ ಏನಾದರೂ ರೂಲ್ಸ್ ತಿದ್ದುಪಡಿ ಮಾಡುವು ದಾಗಲಿ, ಮುಂದೆ ಸರ್ಕಾರದ ಗಮನಕ್ಕೆ ತರದೆ ಹೋದರೆ ಅದು ತಪ್ಪಾಗುತ್ತದೆ, ಮತ್ತು ನಮ್ಮ ಪ್ರತಿನಿಧಿಗಳನ್ನು ಕಳಿಸುವುದೂ ತಪ್ಪಾಗುತ್ತದೆ.

ಶ್ರೀ ಜಿ. ವಿ. ಆಂಜನಪ್ಪ.—ಸ್ವಾಮಿ, ಅದರಲ್ಲಿ ಕೆಲವು ವಿರೋಧ ಪಕ್ಷದ ಸದಸ್ಯರುಗಳಿರುತ್ತಾರೆ, ಅವರಿಗೆ ಮಾತ್ರ ಅದು ಸೀಕ್ರೆಟ್ ಅಷ್ಟೆ. ಉದಾಹರಣೆಗೆ ಮೊನ್ನೆ ಯಾವುದೋ ಒಂದು ನೇಮಕ ಆಗಿದೆ. ಆದರ ಫಲಿತಾಂಶ ಬೀದಿ ಬೀದಿಯಲ್ಲೂ ಗೊತ್ತಾಗಿದೆ. ಆದರೆ ನನಗೆ ಮಾತ್ರ ಗೊತ್ತಿಲ್ಲ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಈ ವಿಚಾರದಲ್ಲಿ ಆದು ಅಟಾನಮಸ್ ಆಗಿದ್ದರೂ ಇರೆಗ್ಯುಲರ್ ಏನಾದರೂ ಇದ್ದರೆ ಅದನ್ನು ಸರ್ಕಾರಕ್ಕೆ ಹೇಳಲೇಬೇಕಾಗುತ್ತದೆ. ಈಗಾಗಲೇ ರಾಜ್ಯಪಾಲರು ಭಾಷಣದಲ್ಲಿ ಕ್ರೆಡಾಭಿವೃದ್ಧಿಗಾಗಿ ಮೈಸೂರು ರಾಜ್ಯಕ್ಕೆಲ್ಲಿ ಹೆಚ್ಚು ಹಣ ಒದಗಿಸಿದ್ದಾರೆಂದು ಹೇಳಿದ್ದಾರೆ. ಮಲ್ಲಾರಾಧ್ಯರು ಅದರ ಅಧ್ಯಕ್ಷರಾಗಿದ್ದಾರೆ. 19 ಜಿಲ್ಲೆಗಳಿಗೆ ಈಗ ಕೊಟ್ಟಿರುವುದು ಏನೂ ಹೆಚ್ಚಾಗುವುದಿಲ್ಲ. ಅದನ್ನು ಒಂದೊಂದು ಜಿಲ್ಲೆಗೆ ಇಷ್ಟೆಂದು ಹಂಚಿ ತೆಗೆದುಕೊಂಡರೆ ಅದು ಏನೂ ಸಾಲದು ಎಂದು ಹೇಳಬೇಕು. ಆದ್ದರಿಂದ ಅದಕ್ಕೆ ಇನ್ನೂ ಹೆಚ್ಚಿನ ಸಹಾಯ ಸಾಲಭ್ಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕುಟುಂಬ ಯೋಜನೆ. ಇದು ಬರಬರುತ್ತಾ ಎಲ್ಲಿ ನೋಡಿದರೂ ಭಾಷಣ, ಎಲ್ಲಿ ನೋಡಿದರೂ ಸಪ್ತಾಹ. ಇದನ್ನು ಡಾಕ್ಟರುಗಳ, ಮುಖಂಡರಲ್ಲಿ ಎಲ್ಲಾ ಕೇಳಿ ಮಾಡಬೇಕಾಗುತ್ತದೆ ಹೊರತು, ಇದು ಬೋರ್ಡುಗಳ ಮುಖಾಂತರ, ಪೋರವಣಿಗೆಯ ಮುಖಾಂತರ ಮಾಡುವುದು ನನಗೆ ಅಷ್ಟು ಸೂಕ್ತವಾಗಿ ಕಾಣಿಸುವುದಿಲ್ಲ. ಉದಾಹರಣೆಗೆ ಈ ಲೂಪ್ ಯಾರೋ ಒಬ್ಬರು ಹಾಕಿಸಿ ಕೊಂಡರು. ಅವರಿಗೆ ಸರಿಯಾದ ಅಡ್ವೈಸ್ ಯಾರೂ ಕೊಟ್ಟಿಲ್ಲ. ಅವರು ಗರ್ಭಿಣಿಯಾದರು. ಸರಿ, ಈಗ ಅವರೇ, ಪ್ರಚಾರಕ್ಕೆ ಹೊರಟು, ಇದರಿಂದ ಏನೂ ಪ್ರಯೋಜನವಿಲ್ಲವೆಂದು ಹೇಳುತ್ತಿದ್ದಾರೆ. ಸುಮ್ಮನೆ ನಾವು ಇದಕ್ಕೆ ನಾಲಿಯಾರು ರೂಪಾಯಿ ಖರ್ಚು ಮಾಡುತ್ತಿದ್ದೇವೆಂದು ಹೇಳಿದರೆ ತಪ್ಪಾಗ ಲಾರದು.

ಸ್ವಾಮಿ, ವ್ಯವಸಾಯ ಮಂತ್ರಿಗಳು ಇಲ್ಲಿರುವುದರಿಂದ ವ್ಯವಸಾಯದ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಇದರಲ್ಲಿ ಹೇಳುವಾಗ ಹೈ ಯೀಲ್ಡಿಂಗ್ ವೆರೈಟಿಗಳು ಹಾಗೂ ಬೆಲೆಗಳ ಬಗ್ಗೆ ಹೇಳಬೇಕಾಗಿದೆ. ರೈತರಿಗೆ ಸುಧಾರಿಸಿದ ಬೀಜಗಳನ್ನು ಕೊಡುವಾಗ ಅವನ್ನು ಮೊದಲಿಗೆ ಟೆಸ್ಟ್ ಮಾಡಿಸಿ ಆ ನಂತರ ಅದನ್ನು ಪ್ರಯೋಗ ಮಾಡಲು ಕೊಡಬೇಕು. ಇಲ್ಲದೇ ಇದ್ದರೆ ಬಹಳ ತೊಂದರೆಗಳಾಗುತ್ತವೆ. ನಮ್ಮ ಮಲೆನಾಡು ಸೀಮೆಯಲ್ಲಿ ಬಹಳ ಉತ್ತಮ ವಾದ ಭತ್ತದ ಬೆಳೆ ಬರುವ ಜಾಗಗಳು ಎಂದು ಇದ್ದರೂ ಈ ಸಾರಿ ವ್ಯವಸಾಯ ಇಲಾಖೆಯವರ ಮಾತನ್ನು ಕೇಳಿ ಹಸಲು ಮಾಡಿದ್ದರಿಂದ ಕೇವಲ ಶೇಕಡಾ ಮೂವತ್ತರಷ್ಟು ಕೂಡ ಕೆಲವು ಕಡೆ ಹೈರು ಬರಲಿಲ್ಲ. ಇದರಿಂದ ದೇಶದ ರೈತ ಜನರಿಗೆ ಬಹಳ ನಷ್ಟವಾಗಿದೆ. ಹೋದವರ್ಷ ನಾವು ಬೀಸಿಗೆ ಬೆಳೆ ಮಾಡಿದೆವು. ಅದು ಬಹಳ ಚೆನ್ನಾಗಿ ಬಂತು. ಆದರೆ ಅದರಂತೆ ಈ ಸಾರಿ ಕೂಡ ಬರುತ್ತದೆ ಎಂದು ಅವರು ಹೇಳಿದ್ದರಿಂದ ನಮ್ಮ ಕಡೆ ಅನೇಕ ಭಾಗಗಳಲ್ಲಿ ಒಳ್ಳೆಯ ಬೆಳೆ ಬರದೇ ಜನಗಳು ಬಹು ತೊಂದರೆ ಪಡುತ್ತಿದ್ದಾರೆ. ಮಲೆನಾಡು ಭಾಗಗಳಾದ ಶಿವಮೊಗ್ಗ, ಚಿಕ್ಕ ಮಗಳೂರು ಇನ್ನಿತರ ಭಾಗಗಳಲ್ಲಿ ಬಹಳ ನಷ್ಟವಾಗಿದೆ. ಇದಕ್ಕೆ ಕಾರಣವೇನು ಎಂದು ಇಲಾಖೆ ಯವರನ್ನು ಕೇಳಿದರೆ ಅವರು ಜುಲೈ ತಿಂಗಳಿಗಿಂತ ಮೊದಲು ನಾಟಿ ಹಾಕಬೇಕಾಗಿತ್ತು ಎಂದು ಈಗ ಪರೀಕ್ಷೆ ಮಾಡದೇ ಹೇಳುತ್ತಾರೆ. ಒಂದು ಕಡೆ ಇಲಾಖೆಯವರು ಬೆಳೆ ಬಹು ಚೆನ್ನಾಗಿ ಬರುತ್ತದೆ

(ಶ್ರೀ ಕೆ. ಟಿ. ಶಾಮಯ್ಯಗೌಡ)

ಎಂದು ದೊಡ್ಡದಾಗಿ ಪ್ರಚಾರ ಭಾಷಣ ಮಾಡುವುದನ್ನು ಕೇಳಿ ನಮ್ಮ ಕಡೆಯಲ್ಲೂ ಜನರು ಇಂತಹ ಒಳ್ಳೇ ಸುಧಾರಿತ ಬೀಜಗಳನ್ನು ಉಪಯೋಗಿಸಬೇಕು ಎಂದು ಮಾಡಿದರು ಆದರೆ ಅವರು ಸರಿಯಾಗಿ ಡೈರೆಕ್ಷನ್ ಕೊಡದೇ ಇದ್ದುದರಿಂದ ಅನೇಕ ಕಡೆ ಬೆಳೆಗಳು ನಾಶವಾಗಿ ನಷ್ಟವಾಗಿದೆ. ನಾವೂ ಕೂಡ ಇವರ ಭಾಷಣಗಳನ್ನು ಕೇಳಿ ಸುಮಾರು ಒಂದು ಎಕರೆಗೆ 40 ಪಲ್ಲ ಎಂದು ಬಂದರೂ 50 ಎಕರೆ ಗಳಲ್ಲಿ ಎಂದರೆ ಸುಮಾರು 1500 ರಿಂದ 2000 ಪಲ್ಲದಷ್ಟು ಭತ್ತ ಬರಬಹುದು ಎಂದು ಭಾವಿಸಿ ಕೊಂಡು ನಾವು ಬೀಜಗಳನ್ನು ಪಯೋಗಿಸಿದೆವು. ಆದರೆ ಶೇಕಡಾ 20ರಿಂದ 30ರಷ್ಟು ಫಸಲೂ ಬರದೇ ನಮಗೆ ಬಹಳ ನಷ್ಟವಾಗಿದೆ. ಆದುದರಿಂದ ಇರಾಖೆಯವರು ಮೊದಲು ಅವರ ಫಾರಂನಲ್ಲಿ ಪ್ರಯೋಗ ಮಾಡಿ ಅದರ ಅನುಭವದ ಮೇಲೆ ರೈತರಿಗೆ ಬೀಜಗಳನ್ನು ಕೊಟ್ಟು ಸರಿಯಾದ ಮಾರ್ಗದರ್ಶನ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದೇ ಇದ್ದರೆ ಇಲ್ಲ. ಸಣ್ಣಪುಟ್ಟ ರೈತರಿಗೆ ಇರಾಖೆಯವರು ಸರಿಯಾದ ಮಾರ್ಗದರ್ಶನ ಮಾಡಬೇಕು. ನನಗೂ ಕೂಡ ಇರಾಖೆಯ ಅಧಿಕಾರಿಗಳು ಚರ್ಚೆ ಮಾಡಿದಾಗ ಜೂನು ತಿಂಗಳಲ್ಲಿ ಬೀಜ ಗಳನ್ನು ಪಯೋಗಿಸಿ ನಾಟಿ ಹಾಕಿಸಿದ್ದರೆ ಸ್ವಲ್ಪ ಮಟ್ಟಿಗೆ ಬೆಳೆ ಬರುತ್ತಿತ್ತು ಎಂದು ಹೇಳಿದರು. ಆದುದರಿಂದ ನಾನು ವ್ಯವಸಾಯದ ಇರಾಖೆಯವರಿಗೆ ಸಲಹೆ ಕೊಡುವುದು, ಯಾವಾಗಲೂ ಸುಧಾರಿತವಾದ ಬೀಜಗಳನ್ನು ತರುವಾಗ ಅದನ್ನು ಪ್ರಯೋಗ ಮಾಡಿ ಪರೀಕ್ಷೆ ಮಾಡಿ ಸಾಮಾನ್ಯ ರೈತನಿಗೂ ಅನುಕೂಲವಾಗುವಂತೆ ತೀವ್ರ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ. ಇದನ್ನು ಅವರು ಸರಿಯಾಗಿ ತಿಳಿದುಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ಈ ಸಾರಿ ನಮ್ಮ ಭಾಗದಲ್ಲಿ ಬಹಳ ನಷ್ಟವಾಗಿದೆ. ಹೊಸ ನಮೂನೆ ಬೀಜಗಳು ಇನ್ನೂ ಹೆಚ್ಚು ಹೆಚ್ಚಾಗಿ ಬರುತ್ತಿವೆ. ಇವನ್ನೂ ಕೂಡ ಪರೀಕ್ಷೆ ಮಾಡಿ ಉಪಯೋಗಿಸಲು ಅನುಕೂಲ ಮಾಡಿಕೊಡುವುದು ಆಗತ್ಯವಾಗಿದೆ. ಈ ಸಾರಿ ಮೇಜ್ ಬಹಳ ಚೆನ್ನಾಗಿ ಬೆಳೆ ಬಂದಿದೆ. ಇದು ಪರವಾಗಿಲ್ಲ. ಆದರೆ ಭತ್ತದ ಬೆಳೆ ಸರಿಯಾಗಿ ಬರಲಿಲ್ಲ. ಇದಕ್ಕೆ ವ್ಯವಸಾಯದ ಇರಾಖೆಯ ಅಸಹಾಯಕತೆಯೇ ಕಾರಣ ಎಂದು ಹೇಳಬೇಕಾಗಿದೆ. ಆದುದರಿಂದ ಬೀಜಗಳನ್ನು ಯಾವಾಗಲೂ ಟೆಸ್ಟ್ ಮಾಡಿಸಿ ಅನಂತರ ಜನರಿಗೆ ಹಂಚುವ ವ್ಯವಸ್ಥೆ ಮಾಡಬೇಕು. ಆದರೆ ಈಗ ಇದನ್ನು ಟೆಸ್ಟ್ ಮಾಡಲು ಗ್ರಾಮ ಸೇವಕರನ್ನು ಅಲ್ಲಲ್ಲಿ ಕಳುಹಿಸುತ್ತಾರೆ. ಅವರಿಗೆ ಅನುಭವ ಸಾಲದು. ಇದರಿಂದ ರೈತರಿಗೆ ಹೆಚ್ಚು ಪ್ರಯೋಜನ ವಾಗುವುದಿಲ್ಲ. ಹಿಂದೆ ಇದೇ ಇರಾಖೆಯಲ್ಲಿ ಗ್ರಾಜುಯೇಟ್ ಆದ ಅಗ್ರಿಕಲ್‌ಚರಲ್ ಡೆಮಾನ್‌ಸ್ಟ್ರೇಟರುಗಳು ಎಂದು ಇದ್ದರು. ಆವರುಗಳು ಅಲ್ಲಲ್ಲಿ ಹೋಗಿ ರೈತರಿಗೆ ಸರಿಯಾದ ಬೀಜಗಳನ್ನು ಕೊಟ್ಟು ಉತ್ತಮವಾದ ಬೆಳೆ ಯಾವ ರೀತಿ ಬರುತ್ತದೆ ಎನ್ನುವುದಕ್ಕೆ ಸಹಾಯ ಮಾಡುತ್ತಿದ್ದರು. ಈಗ ಅವರ ಬದಲಿಗೆ ಗ್ರಾಮಸೇವಕರನ್ನು ಕಳುಹಿಸುತ್ತಾರೆ. ಇದರಿಂದ ಜನತೆಗೆ ಹೆಚ್ಚು ಪ್ರಯೋಜನ ದೊರಕುವುದಿಲ್ಲ. ಇದೇನಾಗಿದೆ ಎಂದರೆ, ಹೊಸ ವೈದ್ಯರಿಗಿಂತ ಹಳೇ ರೋಗಿಯೇ ವಾಸಿ ಎಂಬಂತಾ ಗಿದೆ. ಆದುದರಿಂದ ಇರಾಖೆಯವರು ಹಿಂದೆ ಇದ್ದಂತಹ ಡೆಮಾನ್‌ಸ್ಟ್ರೇಟರುಗಳನ್ನು ಅಲ್ಲಲ್ಲಿ ನೇಮಿಸುವುದು ಉಚಿತ ಎಂದು ಸಲಹೆ ಮಾಡುತ್ತೇನೆ. ಇವರಿಗೆ ಒಂದೊಂದು ಪ್ಲಾಟಿನಲ್ಲಿ ಸುಮಾರು 50 ಎಕರೆಗಳಷ್ಟು ಪ್ರದೇಶ ಎಂದು ಹಿಂದೆ ಕೊಟ್ಟು ಎಲ್ಲೆಲ್ಲಿ ನೀರಿನ ಸೌಕರ್ಯ ಸಿಗುತ್ತದೆ ಅಲ್ಲಿಗೆ ಡೆಮಾನ್‌ಸ್ಟ್ರೇಟರುಗಳು ಹೋಗಿ ರೈತರಿಗೆ ಸರಿಯಾಗಿ ದಾರಿ ತೋರಿಸಿ ಹೆಚ್ಚು ಬೆಳೆ ಬೆಳೆಯಲು ಸಹಾಯ ಮಾಡುತ್ತಿದ್ದರು. ಅದೇ ರೀತಿ ಈಗಲೂ ಮಾಡಲು ಸರಕಾರ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಇಲ್ಲದೇ ಇದ್ದರೆ ರೈತರು ಹೆಚ್ಚು ಬೆಳೆ ಬೆಳೆಯಲು ಸಾಧ್ಯವಾಗುವುದಿಲ್ಲ. ಹೆಚ್ಚಿಗೆ ಬೆಳೆ ಬೆಳೆಯಬೇಕು ಎಂದು ಈಗ ಯೋಜನೆಗಳನ್ನು ಮಾಡಿಕೊಂಡಿರುವಾಗ ತಾವು ಈಗ ಗ್ರಾಮ ಸೇವಕರುಗಳನ್ನು ಇದಕ್ಕಾಗಿ ನೇಮಕ ಮಾಡಿದರೆ ಇದರಿಂದ ಆ ಕೆಲಸಗಳನ್ನು ಮಾಡಲು ಸಾಧ್ಯವಾಗುವುದಿಲ್ಲ.

5-15 P.M.

ಸರಕಾರದವರು ಹೆಬ್ಬಾಳು ಹಾಗೂ ಧಾರವಾಡಗಳಲ್ಲಿ ಅಗ್ರಿಕಲ್ಚರ್ ಕಾಲೇಜುಗಳು ಎಂದು ತೆರೆದಿದ್ದಾರೆ. ಇದರಲ್ಲಿ ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ ಎಂದು ಹೇಳಿದರು. ಆದರೆ ಇಲ್ಲಿ ಯಾರು ಹಳ್ಳಿಯೊಳಗೆ ಇದ್ದು ಕೆಲಸ ಮಾಡಿ ಬೆಳೆ ಮಾಡಬೇಕೆಂದು ಅಸೆಯಿಂದ ಇರುತ್ತಾರೋ ಅಂತಹವರಿಗೆ ಇಲ್ಲ ಸೀಟುಗಳು ಸಿಗುತ್ತಿಲ್ಲ. ಕೇವಲ ಉದ್ಯೋಗದ ಆಸೆ ಇರುವವರಿಗೆ ಮಾತ್ರ ಇಲ್ಲ ಸೀಟುಗಳನ್ನು ಕೊಡುತ್ತಿದ್ದಾರೆ. ಏಕೆಂದರೆ ಈಚೆಗೆ ಇಲ್ಲ ಸಂಬಳಗಳನ್ನೂ ಜಾಸ್ತಿ ಮಾಡಿವ್ದಾರೆ. ಹಳ್ಳಿಗಳಿಂದ ಬರುವ ವಿದ್ಯಾರ್ಥಿಗಳಿಗೆ ಇಲ್ಲ ಹೆಚ್ಚು ಪ್ರೋತ್ಸಾಹ ಸಿಗುತ್ತಿಲ್ಲ. ಆದುದರಿಂದ ಇಂಜಿನೀಯರಿಂಗು ಹಾಗು ಇತರ ಕಾಲೇಜುಗಳನ್ನು ಜಾಸ್ತಿ ಮಾಡುವಂತೆ ಅಗ್ರಿಕಲ್‌ಚರು ಕಾಲೇಜುಗಳನ್ನೂ ಜಾಸ್ತಿ

ಮಾಡಬೇಕೆಂದು ಕೇಳುತ್ತಲೇ ಇದ್ದೇವೆ. ಈಗ ಧಾರವಾಡ ಹಾಗೂ ಹೆಬ್ಬಾಳದಲ್ಲಿರುವ ಕಾಲೇಜುಗಳಲ್ಲಿ ಹುಡುಗರ ಸಂಖ್ಯೆ ಜಾಸ್ತಿಯಾಗಿದೆ ಎಂದು ಇರುವಾಗ ಮಲೆನಾಡಿನಲ್ಲಿ ಒಂದು ಅಗ್ರಿಕರ್‌ಚರು ಕಾಲೇಜನ್ನು ತೆರೆಯುವುದಕ್ಕೆ ಸರಕಾರ ಏಕೆ ಪ್ರಯತ್ನ ಮಾಡುತ್ತಿಲ್ಲ? ನಮ್ಮ ಮಲೆನಾಡಿನಲ್ಲ ಭತ್ತ ಬೆಳೆಯುತ್ತಾರೆ, ತೆಂಗು ಬೆಳೆಯುತ್ತಾರೆ ಅಡಕೆ ಬೆಳೆಯುತ್ತಾರೆ. ಈ ಸಾರಿ ಶಿವಮೊಗ್ಗಾದಲ್ಲ ಒಂದು ಅಗ್ರಿಕರ್‌ಚರು ಕಾಲೇಜು ತೆರೆಯುತ್ತಾರೆ ಎಂದು ಇತ್ತು. ಅದು ಇನ್ನೂ ಆಗಲಿಲ್ಲ. ಇದರ ಬಗ್ಗೆ ಸರಕಾರ ಯೋಚನೆ ಮಾಡಬೇಕು. ಸರ್ ಮಿರ್ಜಾರವರು ದಿವಾನರಾಗಿದ್ದ ಕಾಲದಲ್ಲಿ Shimoga is the granary of the State ಎಂದು ಹೇಳಿದ್ದರು. ಇಂತಹ ಭಾಗದಲ್ಲಿ ಒಂದು ಅಗ್ರಿಕರ್‌ಚರು ಕಾಲೇಜನ್ನು ಇನ್ನೂ ತೆರೆಯಲು ಸರಕಾರ ಹಿಂದು ಮುಂದು ನೋಡುತ್ತಿದೆ. ಇಲ್ಲಿರುವ ಕಾಫಿ ಪ್ಲಾಂಟರುಗಳ ಮಕ್ಕಳು ಹಾಗೂ ಚಿಕ್ಕಮಗಳೂರಿನಲ್ಲಿರುವ ಕಾಫಿ ಪ್ಲಾಂಟರುಗಳ ಮಕ್ಕಳು ವ್ಯವಸಾಯವನ್ನು ಸುಧಾರಿತ ರೀತಿಯಲ್ಲಿ ಬೆಳಸಬೇಕು ಎಂದು ಆಸೆಯುಂದಿದ್ದಾರೆ. ಹೆಚ್ಚು ಅಡಕೆ ಬೆಳೆ ಬೆಳೆಯುವವರೂ ಇದ್ದಾರೆ. ಇವರೆಲ್ಲರಿಗೂ ಅನುಕೂಲವಾಗುವಂತೆ ಇಲ್ಲಿನ ವಿದ್ಯಾರ್ಥಿಗಳು ವ್ಯವಸಾಯ ಅಭ್ಯಾಸ ಮಾಡಲು ಒಂದು ಅಗ್ರಿಕರ್‌ಚರಲ್ ಕಾಲೇಜನ್ನು ಈ ಸಾಲಿನಲ್ಲಿ ಕೊಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೆಡಿಕರ್ ಕಾಲೇಜು ನಮ್ಮ ಕಡೆಗೆ ಬರುತ್ತೆ. ಎಂದು ಇದ್ದದ್ದನ್ನು ಮಾನ್ಯ ಗಾಂಜೀ ವೀರಪ್ಪನವರು ದಾವಣಗೆರೆಗೆ ತೆಗೆದುಕೊಂಡು ಬಿಟ್ಟರು. ವ್ಯವಸಾಯದ ಕಾಲೇಜು ಒಂದನ್ನು ನಮ್ಮ ಶಿವಮೊಗ್ಗ ಜಿಲ್ಲೆಗೆ ಕೊಡಲಿಕ್ಕೆ ಸರ್ಕಾರದವರು ಮನಸ್ಸು ಮಾಡಬೇಕು. ಇದುವರೆಗೆ ಕೊಡದಿರುವುದಕ್ಕೆ ಏನು ತೊಂದರೆ ಬಂದಿದೆಯೆಂದು ಕೇಳುತ್ತೇನೆ. ಯಾವ ಪ್ರದೇಶಕ್ಕೆ ಮೊದಲು ಕೊಡಬೇಕು ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಶೇಕಡ 80 ರಷ್ಟು ರೈತರಿದ್ದಾರೆಂದು ಸರ್ಕಾರದವರು ಹೇಳುತ್ತಿರುವಾಗ, ವ್ಯವಸಾಯದ ಕಾಲೇಜಿಗೆ ರೈತರ ಮಕ್ಕಳನ್ನು ಸೇರಿಸಿಕೊಳ್ಳುತ್ತಿಲ್ಲ. ಕೆಲಸಕ್ಕೆ ಸೇರಿಕೊಳ್ಳುವಂತಹವರನ್ನು ಮಾತ್ರ ವ್ಯವಸಾಯದ ಕಾಲೇಜಿಗೆ ಸೇರಿಸಿಕೊಳ್ಳುತ್ತಿದ್ದಾರೆ. ಹೆಬ್ಬಾಳ ಮತ್ತು ಧಾರವಾಡದಲ್ಲಿ ಒಂದೊಂದು ಕಾಲೇಜುಗಳಿವೆ. ಇವು ಸಾಲದು. ಹೆಚ್ಚು ಹೆಚ್ಚು ಜಿಲ್ಲೆಗಳಲ್ಲಿ ವ್ಯವಸಾಯದ ಕಾಲೇಜುಗಳನ್ನು ಪ್ರಾರಂಭ ಮಾಡಬೇಕು. ಮುಖ್ಯವಾಗಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ವ್ಯವಸಾಯದ ಕಾಲೇಜನ್ನು ಬರುವ ವರ್ಷದಿಂದ ಪ್ರಾರಂಭ ಮಾಡಿದರೆ ದೇಶದ ಹಿತದೃಷ್ಟಿಯಿಂದ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

ಶ್ರೀ ಜಿ. ಎ. ಆಂಜನಪ್ಪ.—ನಾನು ಪ್ರತಿಯೊಂದು ಜಿಲ್ಲೆಗೂ ಒಂದೊಂದು ವ್ಯವಸಾಯದ ಕಾಲೇಜನ್ನು ಕೊಡಬೇಕೆಂದು ಹೇಳುತ್ತೇನೆ, ಅದಕ್ಕೆ ತಾವೇನು ಹೇಳುತ್ತೀರಿ?

ಶ್ರೀ ಕೆ. ಟಿ. ಶಾಮಯ್ಯಗೌಡ.—ಕೊಡಲಿ, ಸಂತೋಷ. ಶಿವಮೊಗ್ಗಾಕ್ಕೆ ಏತಕ್ಕೆ ಮೊದಲ ಕೊಡಬೇಕೆಂದು ಹೇಳುತ್ತೀನೆಂದರೆ, ಅಲ್ಲಿ ಎಲ್ಲಾ ರೀತಿಯ ಬೆಳೆಗಳನ್ನೂ ಬೆಳೆಯುತ್ತಾರೆ. ಮೊದಲು ಮೆಡಿಕರ್ ಕಾಲೇಜನ್ನು ಕೊಡಬೇಕೆಂದು ಕೇಳುತ್ತಿದ್ದೆವು, ಏಕೆಂದರೆ ಶಿವಮೊಗ್ಗೆ ಮತ್ತು ಭದ್ರಾವತಿ ಎರಡು ನಗರಗಳಲ್ಲೂ ಜನರಲ್ ಆಸ್ಪತ್ರೆಗಳಿವೆ. ಶಿವಮೊಗ್ಗ ಜನರಲ್ ಆಸ್ಪತ್ರೆಯಲ್ಲಿ 600 ಬೆಡ್‌ಗಳಿವೆ. ಆದರೆ ನಮಗೆ ಸಿಗಬೇಕಾದ ಮೆಡಿಕರ್ ಕಾಲೇಜು ದಾವಣಗೆರೆಗೆ ಹೋಯಿತು. ಅದಕ್ಕೆ ಈಗ ಒಂದು ವ್ಯವಸಾಯದ ಕಾಲೇಜನ್ನಾದರೂ ಕೊಡಬೇಕೆಂದು ಕೇಳುತ್ತಿರುವುದು.

ಶ್ರೀ ಎ. ಬಿ. ಪಾಟೀಲ್ (ನಾಮನಿರ್ದೇಶ ಹೊಂದಿದವರು).—ಶಿವಮೊಗ್ಗಕ್ಕೆ ವ್ಯವಸಾಯದ ಕಾಲೇಜನ್ನು ಕೊಟ್ಟರೆ ರೈತರ ಮಕ್ಕಳೇ ಬಂದು ಸೇರುತ್ತಾರೆ ಎನ್ನುವ ಗ್ಯಾರಂಟಿಯಾದರೂ ಏನಿದೆ?

ಶ್ರೀ ಕೆ. ಟಿ. ಶಾಮಯ್ಯಗೌಡ.—ನಮ್ಮ ಜಿಲ್ಲೆಯಲ್ಲ ಶೇಕಡ 75 ರಷ್ಟು ಜನ ವ್ಯವಸಾಯದಲ್ಲಿ ನಿರತರಾದವರು ಇದ್ದಾರೆ. ಎಲ್ಲಾ ತರಹದ ಬೆಳೆಗಳೂ ಸಹ ನಮ್ಮ ಜಿಲ್ಲೆಯಲ್ಲಿ ಬೆಳೆಯುತ್ತಿದೆ. ರೀಸರ್ಚ್ ಮಾಡುವುದಕ್ಕೆ, ಪರಿಶೋಧನೆ ಮಾಡುವುದಕ್ಕೆ ನಮ್ಮ ಜಿಲ್ಲೆಯಲ್ಲಿ ತಕ್ಕ ಅವಕಾಶವಿದೆ. ನಮ್ಮದು ಮಲೆನಾಡು. ನಮ್ಮ ಜಿಲ್ಲೆಯ ಪಕ್ಕದಲ್ಲೇ ಚಿಕ್ಕಮಗಳೂರು ಜಿಲ್ಲೆಯಿದೆ. ಅದೂ ಸಹ ಮಲೆನಾಡು ಪ್ರದೇಶ. ಅಲ್ಲಿ ಕಾಫಿ ಬೆಳೆಯುತ್ತಾರೆ. ತೆಂಗಿನಕಾಯಿ ಮತ್ತು ಅಡಿಕೆ ಬೆಳೆಯುತ್ತಾರೆ. ನಮ್ಮ ಶಿವಮೊಗ್ಗದಲ್ಲಿ ಶೇಕಡ 75 ರಷ್ಟು ಎಲ್ಲಾ ಜಾತಿಯ ಅಡಿಕೆಯನ್ನು ಬೆಳೆಯುತ್ತಾರೆ. ಅಲ್ಲಿ ಒಂದು ವ್ಯವಸಾಯದ ಕಾಲೇಜನ್ನು ತೆರೆದರೆ, ಅಲ್ಲಿ ಕಲತ ವಿದ್ಯಾರ್ಥಿಗಳು ನೌಕರಿಗೆ ಹೋಗದೆ ತಮ್ಮ ತಮ್ಮ ಜಮೀನುಗಳಲ್ಲಿ ಆಧುನಿಕ ವ್ಯವಸಾಯಕ್ಕೆ ಗಮನ ಕೊಡುತ್ತಾರೆ. ರಾಯಚೂರು ಜಿಲ್ಲೆಗೆ ಒಂದು ವ್ಯವಸಾಯದ ಕಾಲೇಜನ್ನು ಕೊಟ್ಟಿದ್ದಾರೆ, ಸಂತೋಷ. ಏಕೆಂದರೆ ಅಲ್ಲಿ ಇರಿಗೇಷನ್ ಪ್ರಾಜೆಕ್ಟ್ ಇದೆ. ಸಂಶೋಧನೆಗೆ ಅವಕಾಶವಿದೆ. ಅಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯಲು ಅನುಕೂಲವಿದೆ. ನಾನು ಶಿವಮೊಗ್ಗ ಜಿಲ್ಲೆಗೆ ಮೆಡಿಕರ್ ಕಾಲೇಜನ್ನು ಕೇಳುತ್ತಿಲ್ಲ, ಟೆಕ್ನಿಕರ್ ಕಾಲೇ

(ಶ್ರೀ ಕೆ. ಟಿ. ಶಾಮಯ್ಯ ಗೌಡ)

ಜನ್ನು ಕೇಳುತ್ತಿಲ್ಲ, ಏಕೆಂದರೆ ಅಂತಹ ಕಾಲೇಜುಗಳು ನಮ್ಮ ರಾಜ್ಯದಲ್ಲಿ ಸಾಕಷ್ಟಿವೆ. ವ್ಯವಸಾಯದ ಕಾಲೇಜು ಬಹಳ ಉಪಯುಕ್ತವಾದುದು, ಆದ್ದರಿಂದ ನಮ್ಮ ಜಿಲ್ಲೆಗೆ ಒಂದು ವ್ಯವಸಾಯದ ಕಾಲೇಜನ್ನು ಕೊಡಿ ಎಂದು ಕೇಳುತ್ತಿರುವುದು.

ಶ್ರೀ ಕೆ. ಸೂರ್ಯನಾರಾಯಣ ಅಡಿಗ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ)—ಮಾನ್ಯ ಸದಸ್ಯರು ಶಿವಮೊಗ್ಗ ಜಿಲ್ಲೆಗೆ ಒಂದು ವ್ಯವಸಾಯದ ಕಾಲೇಜನ್ನು ಕೊಡಬೇಕು, ಅಲ್ಲಿ ಬೇಕಾದಷ್ಟು ಬತ್ತ, ಅಡಿಕೆ ಬೆಳೆಯುತ್ತಾರೆ ಸಂಶೋಧನೆಗೆ ಅನುಕೂಲವಿದೆಯೆಂದು ಹೇಳಿದರು. ಅದೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ತೆಗೆದುಕೊಂಡರೆ ಶಿವಮೊಗ್ಗದಲ್ಲಿ ಬೆಳೆಯುವುದಕ್ಕಿಂತ ಎರಡರಷ್ಟು ಅಡಿಕೆ ಮತ್ತು ಬತ್ತವನ್ನು ಬೆಳೆಯುತ್ತಾರೆ, ಆದ್ದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೂ ಒಂದು ವ್ಯವಸಾಯದ ಕಾಲೇಜನ್ನು ಕೊಡಬೇಕಾಗುತ್ತದೆ.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಅಲ್ಲಿ ಬತ್ತ ಮತ್ತು ಅಡಿಕೆ ಎರಡನ್ನೇ ಬೆಳೆಯುವುದು. ಬೇರೆ ಬೆಳೆಗಳನ್ನು ಬೆಳೆಯುವುದಿಲ್ಲ. ಅಲ್ಲದೆ ಅಲ್ಲಿ ಒಂದೇ ಜಾತಿಯ ಅಡಿಕೆಯನ್ನು ಬೆಳೆಯುತ್ತಾರೆ. ಅದೇ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲಾ ರೀತಿಯ ಬೆಳೆಗಳನ್ನು ಅಂದರೆ ಬತ್ತ, ಅಡಿಕೆ, ನೆಲಗಡಲೆ ಹತ್ತಿ ಮುಂತಾದವನ್ನು ಬೆಳೆಯುತ್ತಾರೆ, ಮತ್ತು ಎಲ್ಲಾ ಜಾತಿಯ ಅಡಿಕೆಯನ್ನು ಬೆಳೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೊಂದು ಸಲ 200 ಇಂಚು ಮಳೆಯಾಗುವುದರಿಂದ ಎಲ್ಲಾ ರೀತಿಯ ಬೆಳೆಗಳನ್ನು ಬೆಳೆಯುವುದಕ್ಕಾಗುವುದಿಲ್ಲ. ನಮ್ಮ ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳಾದ ತರೀಕೆರೆ, ಚಿತ್ರದುರ್ಗ, ಸಾಗರ, ಚಿಕ್ಕಮಗಳೂರಿನಲ್ಲಿ ಹೆಚ್ಚಾಗಿ ಅಡಿಕೆಯನ್ನು ಬೆಳೆಯುತ್ತಾರೆ. ಈಗಾಗಲೇ ಧಾರವಾಡದಲ್ಲಿ ಒಂದು ವ್ಯವಸಾಯದ ಕಾಲೇಜನ್ನು ಪ್ರಾರಂಭ ಮಾಡಿದ್ದಾರೆ. ಏಕೆಂದರೆ ಅದು ಸೆಮಿ ಮಲೆನಾಡು ಪ್ರದೇಶ. ಅಲ್ಲಿ ಸಂಶೋಧನೆಗೆ ಅನುಕೂಲ ಮಾಡಿಕೊಂಡಿದ್ದಾರೆ. ಮತ್ತು ಎಲ್ಲಾ ರೀತಿಯ ಅನುಕೂಲಗಳೂ ಇವೆ.

ಶ್ರೀ ಎಸ್. ಸಿ. ಕುಬ್ಸದ್ (ವಿಧಾನಸಭಾ ಕ್ಷೇತ್ರ).—ಧಾರವಾಡದಲ್ಲಿ ವ್ಯವಸಾಯದ ಕಾಲೇಜು ಇದೆ, ಅಲ್ಲಿ ಎಲ್ಲಾ ರೀತಿಯ ಅನುಕೂಲಗಳೂ ಇವೆಯೆಂದು ತಾವು ಹೇಳುತ್ತೀರಿ. ಆದರೆ ಈಗ ವ್ಯವಸಾಯದ ಕಾಲೇಜಿನ ರೀಸರ್ಚ್ ಇನ್ಸ್‌ಟಿಟ್ಯೂಟನ್ನು ಬೆಂಗಳೂರಿಗೆ ಷಿಫ್ಟ್ ಮಾಡಿದ್ದಾರೆ. ಅಲ್ಲಿಯ ಯೂನಿವರ್ಸಿಟಿಯವರು ರೀಸರ್ಚ್ ಇನ್ಸ್‌ಟಿಟ್ಯೂಟನ್ನು ನಡೆಸುವುದಕ್ಕೆ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಇದರಿಂದ ಧಾರವಾಡ ಜಿಲ್ಲೆಗೆ ಅನುಕೂಲವಾಯಿತೋ ಅಥವಾ ಅನಾನುಕೂಲವಾಯಿತೋ ಎಂಬುದನ್ನು ತಾವೇ ಯೋಚನೆ ಮಾಡಿ.

ಶ್ರೀ ವೈ. ಎಸ್. ಪಾಟೀಲ್ (ಪದವೀಧರರ ಕ್ಷೇತ್ರ).—ಭೂಮಿಯನ್ನು ಹೊಂದಿರತಕ್ಕವರು ವ್ಯವಸಾಯದ ಕಾಲೇಜಿಗೆ ಸೇರಲು ಬಂದರೆ ಅಂತಹವರಿಗೆ ಮೊದಲ ಪ್ರಿಫರೆನ್ಸ್ ಕೊಡಬೇಕೆಂದು ತಾವು ಹೇಳುತ್ತೀರಿ. ಮಾನ್ಯ ಸದಸ್ಯರು ಹೇಳುತ್ತಿರುವುದು ಯೋಗ್ಯವಾಗಿದೆ. ಆದರೆ ಭೂಮಿ ಇರುವವರು ಕಾಲೇಜಿಗೆ ಸೇರಿಬಿಟ್ಟರೆ, ಅಂತಹವರ ಭೂಮಿಯನ್ನು ಸರ್ಕಾರದವರು ಸ್ವಾಧೀನ ಪಡಿಸಿಕೊಳ್ಳುತ್ತಾರಲ್ಲಾ, ಆಗ ಏನು ಮಾಡಬೇಕು ?

ಶ್ರೀ ಕೆ. ಟಿ. ಶಾಮಯ್ಯಗೌಡ.—ಒಬ್ಬ ತಂದೆಗೆ ನಾಲ್ಕಾರು ಮಕ್ಕಳಿರುತ್ತವೆ. ಒಬ್ಬ ಮಗ ಕಾಲೇಜಿಗೆ ಸೇರಿದರೆ ಉಳಿದವರು ಜಮೀನನ್ನು ನೋಡಿಕೊಳ್ಳುತ್ತಾರೆ.

Sri JIVARAJ HIRACHAND SHAW (Legislative Assembly Constituency).—Sugarcane research is transferred from Dharwar to Mandya.

Sri VENKANAGOWDA SIDDANAGOWDA (Local Authorities' Constituency). I wish that agriculture is one and research is another. We are already having two agricultural colleges. As things stand today, graduates coming out are finding it very difficult to get employment and all of them are not inclined to go back to the land. There are 17 Farmers' Training Schools and one tarining school is started in Gangavadi. In addition to this, if there is a problem of any crop research, the university is specially created to enhance the research efficiency and any research on any crop can be taken up by the university as a

special case according to the requirement of the farmers. There may be farmers' training schools which may be under the Taluk Development Boards. If Sri Shamaiah Gowda feels that there should be another Agricultural College at this moment, I respectfully say that sufficient provision has been made and schemes have been evolved to train sons of farmers and there is not much need for another Agricultural College.

ಶ್ರೀ ಕೆ. ಟಿ. ಶಾಮಯ್ಯ ಗೌಡ.— ನಾನು ಅಡಿಕೆ ರೀಸರ್ಚ್ ಬಗ್ಗೆ ಹೇಳುತ್ತಿದ್ದೆನು. ರೀಸರ್ಚ್ ಸರಿಯಾಗಿ ನಡೆಸಿದರೆ ಒಳ್ಳೆ ಪರಿಣಾಮ ಉಂಟಾಗುತ್ತದೆ. ವ್ಯವಸಾಯದಲ್ಲಿ ಆಸಕ್ತಿ ಇರತಕ್ಕಂಥ ವಿದ್ಯಾರ್ಥಿಗಳು ಅಗ್ರಿಕಲ್ಚರರ್ ಕಾಲೇಜಿಗೆ ಹೋಗಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಆ ನಂತರ ವ್ಯವಸಾಯದಲ್ಲಿ ನಿರತರಾಗಿ ಕೆಲಸ ಮಾಡಿದರೆ ಹೆಚ್ಚು ಪ್ರಯೋಜನವಾಗುತ್ತದೆ. ನನ್ನ ಮಗನನ್ನು ಅಗ್ರಿಕಲ್ಚರರ್ ಕಾಲೇಜಿಗೆ ಕಳಿಸಬೇಕೆಂದು ಮಾಡಿದರೆ ಅಲ್ಲಿ ಅವನಿಗೆ ಸೀಟು ಸಿಕ್ಕಲಿಲ್ಲ. ಅವನನ್ನು ಮೆಡಿಕಲ್ ಕಾಲೇಜಿಗೆ ಹಾಕಬೇಕಾಯಿತು. ಇವನಿಗೆ ವ್ಯವಸಾಯದಲ್ಲಿ ಹೆಚ್ಚು ಆಸಕ್ತಿ ಇದೆ. ಮೆಡಿಕಲ್ ಸ್ಟೂಡೆಂಟ್ ಆದರೂ ಕೂಡ ಫೈನಲ್ ಇಯರ್ ಎಗ್ಜಾಮಿನೇಷನ್‌ನಲ್ಲಿ ಇದ್ದರೂ ಕೂಡ ಪೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡುತ್ತಾನೆ. ಸ್ವತಃ ಟ್ರ್ಯಾಕ್ಟರ್ ನಡೆಸುತ್ತಾನೆ. ಯಾರಿಗೆ ಇಷ್ಟ ಇದೆ ಅಂಥವರು ವ್ಯವಸಾಯದಲ್ಲಿ ನಿರತರಾದರೆ ದೇಶಕ್ಕೆ ಅನುಕೂಲವಾಗುತ್ತದೆ. ಶಿವಮೊಗ್ಗದಲ್ಲಿ ಒಂದು ರೀಸರ್ಚ್ ಸೆಂಟರ್ ಮಾಡಲು ಎಲ್ಲ ಅನುಕೂಲವಿದೆ. ಆದುದರಿಂದ ಈ ಸ್ಥಳದಲ್ಲಿ ಮಾಡಬೇಕು ಎಂದು ಹೇಳುತ್ತೇನೆ. ಬೇರೆ ಕಡೆ ಇದನ್ನು ಮಾಡಕೂಡದು ಎಂದು ಇದರ ಅರ್ಥವಲ್ಲ.

ಇನ್ನು ಅರಣ್ಯಗಳ ಬಗ್ಗೆ ಈಗ ಹೇಳದೆ ಮುಂದೆ ಬಜೆಟ್ಟಿನ ಕಾಲದಲ್ಲಿ ಹೇಳುತ್ತೇನೆ. ಅರಣ್ಯ ಸಂಪತ್ತು ಅರಣ್ಯ ಇರಾಖೆ ಬಗ್ಗೆ ನಾನು ಅನೇಕ ಸಲ ಹೇಳಿದ್ದೇನೆ. 'ಘರ್ ತೋಡಕೇ ಮಂಟಪ್ ಬನಾವ್' ಎಂದು ಒಂದು ಗಾದೆ ಮಾತು ಇದೆ. ಮನೆ ಒಡೆದು ಮಂಟಪ ಮಾಡಿದನು ಎಂದು ಇದರ ಅರ್ಥ. ಮಲೆನಾಡು ಫಾರೆಸ್ಟ್ ವಿಚಾರದಲ್ಲಿ ಈ ರೀತಿ ಮಾಡಲಾಗುತ್ತಿದೆ. ಅಣೆಕಟ್ಟು ಕಟ್ಟುವುದಕ್ಕಾಗಿ, ಎಲೆಕ್ಟ್ರಿಕ್ ಲೈನ್ಸ್ ಎಳೆಯುವುದಕ್ಕಾಗಿ ಕಾಡು ಕಡಿಯುತ್ತಾರೆ. ನಮ್ಮ ಶಿವಮೊಗ್ಗ ಜಿಲ್ಲೆಯ ಫಾರೆಸ್ಟಿನಲ್ಲಿ ನಂದಿ, ಮತ್ತಿ ಹೊನ್ನೆ ಮುಂತಾದ ಒಳ್ಳೇ ಮರಗಳನ್ನು ಕಡಿದಿದ್ದಾರೆ. ಕಾಡು ಬೆಳೆಸುವುದನ್ನು ಅರಣ್ಯದಲ್ಲಿ ಬೆಳೆಸುತ್ತಾರೆ. ಒಂದು ಮಾತು ಒತ್ತಾಯ ಪೂರ್ವಕವಾಗಿ ಹೇಳಲು ಬಯಸುತ್ತೇನೆ. ಕಾಡು ಕಡಿಯುವುದರಿಂದ ಅಲ್ಲಿ ನೀರು ಕಡಿಮೆಯಾಗಿದೆ. ಕಾಡು ಕಡಿದು ಯುಕ್ಲಿಪ್ಟಿಸ್ ಮರಗಳನ್ನು ನೆಡುತ್ತಿದ್ದಾರೆ. ಕಾಡಿನಲ್ಲಿ ಮರಗಳು ಬೆಳೆಯುತ್ತವೆ. ಆದರೆ ಎಲ್ಲಿ ಕಾಡು ಇಲ್ಲವೋ ಎಲ್ಲ ಮರಗಳನ್ನು ಹಚ್ಚುವುದು ಅಗತ್ಯವಿದೆಯೋ ಅಂಥ ಮೈದಾನ ಪ್ರದೇಶದಲ್ಲಿ ಮರಗಳನ್ನು ನೆಡಬೇಕು. ದೇವರು ಕೊಟ್ಟಂಥ ಕಾಡನ್ನು ಕಡಿದು ಮರಗಳನ್ನು ನೆಡುವುದು ಸರಿಯಲ್ಲ. ಈ ಕೆಲಸವನ್ನು ಮೈದಾನ ಪ್ರದೇಶದಲ್ಲಿ ಮಾಡಬೇಕು. ಮರ ಕಡಿದು ನಾಟಾ ವ್ಯಾಪಾರ ಮಾಡಿದ್ದಕ್ಕೆ ಇಷ್ಟು ಹಣ ಬಂತು, ಇಷ್ಟು ಮರಗಳನ್ನು ನೆಟ್ಟಿದ್ದೇವೆ ಎಂದು ಬರಿ ಅಂಕಿ ಸಂಖ್ಯೆಗಳನ್ನು ಹೇಳುವುದರಿಂದ ಏನೂ ಪ್ರಯೋಜನವಿಲ್ಲ. ಆದುದರಿಂದ ಫಾರೆಸ್ಟ್ ಹಾಳು ಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ಹಾಗೂ ಮಲೆನಾಡಿನಲ್ಲಿ ಹೊಸದಾಗಿ ಕಾಡು ಮಾಡುವುದೂ ಬೇಡ ಎಂದು ಕಡ್ಡಾಯವಾಗಿ ಹೇಳುತ್ತೇನೆ.

ಇನ್ನು ಸಂಪರ್ಕ ಸಾಧನೆ ರಸ್ತೆಯ ವಿಚಾರ ಒಂದು ಮಾತು ಹೇಳಲು ಬಯಸುತ್ತೇನೆ. ಪಿ.ಡಬ್ಲ್ಯೂ.ಡಿ. ಯಿಂದ ಮಾಡಿದ ರಸ್ತೆ ಬಗ್ಗೆ ಮೇಲ್ವಿಚಾರಣೆ ಚಕ್ ಇಲ್ಲದೆ ರಸ್ತೆ ಹಾಳಾಗಿ ದೇಶದ ಹಣ ವ್ಯರ್ಥವಾಗುತ್ತಿದೆ. ಕಂಟ್ರಾಕ್ಟರರು ತಪ್ಪು ಮಾಡಿದರೆ ಕ್ರಿಮಿನಲ್ ಪ್ರೊಸೆಕ್ಯೂಷನ್ ಮಾಡತಕ್ಕಂಥ ಕಾನೂನು ಪಾರ್ಲಿಮೆಂಟಿನಲ್ಲಿ ಬರುತ್ತದೆ ಎಂದು ತಿಳಿದು ಬಂದಿದೆ. ರಸ್ತೆ ಬಗ್ಗೆ ಎಷ್ಟು ಹಣ ಖರ್ಚು ಆಗಿದೆ ಎಂದು ತೋರಿಸುತ್ತೀರಿ ಮತ್ತು ದೇಶದ ಆಸೆಟ್ಸು ಎಂದು ಹೇಳುತ್ತೀರಿ. ಆದರೆ ರಸ್ತೆ ಮಾಡಿದ ಮೇಲೆ ಮೂರು ತಿಂಗಳು ಕೂಡ ಅದು ನಿಲ್ಲವುದಿಲ್ಲ. ಈ ಹಿಂದೆ ಮಾಡಿದ ರಸ್ತೆ ಸರಿಯಾಗಿ ಉಳಿಯುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಹೊಸದಾಗಿ ರಸ್ತೆ ರಚನೆ ಆ ನಂತರ ತೆಗೆದುಕೊಳ್ಳಬೇಕು. ಇದಕ್ಕೆ ಗಮನ ಕೊಡಬೇಕು ಎಂದು ಹೇಳುತ್ತೇನೆ. ವ್ಯರ್ಥವಾಗಿ ಹಣ ವ್ಯಯ ಮಾಡುವುದು ಬೇಡ. ಹಿಂದೆ ತೆಗೆದುಕೊಂಡ ರಸ್ತೆ ಬಗ್ಗೆ ಉಪೇಕ್ಷೆ ಮಾಡದೆ ಅದರ ಬಗ್ಗೆ ಸರಕಾರ ಗಮನ ಕೊಡುವುದು ಅಗತ್ಯ.

ಇನ್ನು ಟ್ರಾನ್ಸ್‌ಪೋರ್ಟ್ ಬಗ್ಗೆ ಹೇಳುತ್ತೇನೆ. ಟ್ರಾನ್ಸ್‌ಪೋರ್ಟ್ ಬಗ್ಗೆ ಎಷ್ಟು ಹೇಳಿದರೂ ಸಾಲದು. ಈ ವರ್ಷದ ಬಜೆಟ್ಟಿನಲ್ಲಿ ಬ್ಯಾಲನ್ಸ್ ಷೀಟ್ ನೋಡಿ ಬಜೆಟ್ ಚರ್ಚೆಯ ಕಾಲಕ್ಕೆ ಈ ಬಗ್ಗೆ ಹೇಳುತ್ತೇನೆ. ಈ ರೀತಿ ರಸ್ತೆ ನ್ಯಾಷನಲೈಜೇಷನ್ ಮಾಡುವುದು ಬೇಡ. ರಾಷ್ಟ್ರೀಕರಣ ಮಾಡುವುದಾದರೆ ಮದ್ರಾಸ್ ರಾಜ್ಯದಲ್ಲಿ ಮಾಡಿರುವಂತೆ ಹೆಚ್ಚು ದೂರವಿರುವ ಮಾರ್ಗಗಳಲ್ಲಿ ಮಾಡಿ

(ಶ್ರೀ ಕೆ. ಟಿ. ಶಾಮಯ್ಯಗೌಡ)

ಅದಕ್ಕೆ ಕ್ರಮವಾಗಿ ಚೆನ್ನಾಗಿರುವ ಬಸ್‌ಗಳನ್ನು ಹಾಕಿ. ನರಿಯಾದ ರೀತಿಯಲ್ಲಿ ಆದಳಿತವನ್ನು ನಡೆಸಿ ಲಾಭವನ್ನು ತೋರಿಸಿ. 18 ಕೋಟಿ ರೂಪಾಯಿ ಬಂಡವಾಳ ಹಾಕಿರುವುದಕ್ಕೆ ನಮಗೆ ಏನು ಲಾಭ ಬರುತ್ತಿದೆ, ಎಷ್ಟು ಹಣ ವ್ಯಯವಾಗುತ್ತಿದೆ ಎಂದು ನೋಡಬೇಕು. ರಾಷ್ಟ್ರೀಕರಣ ಮಾಡಿರುವುದರಿಂದ ಜನರಿಗೆ ಹೆಚ್ಚಿನ ಪ್ರಯೋಜನ ಏನಾದರೂ ಆಗಿದೆಯೇ ಎಂಬುದನ್ನೂ ಸ್ವಲ್ಪ ಯೋಚನೆ ಮಾಡಬೇಕು.

ರೀಜನರ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಮತ್ತು ಆಫೀಸುಗಳಿವೆ. ಇದನ್ನು ಮೊದಲುರದ್ದು ಮಾಡುವುದು ಒಳ್ಳೆಯದು. ಅಲ್ಲಿ ನಡೆಯುವ ಅನ್ಯಾಯ ಮತ್ತು ಕರಪ್‌ಷನ್ ನೋಡಿ ನಾನು ಅನೇಕ ಸಾರಿ ಈ ಸಭೆಯಲ್ಲಿ ಹೇಳಿದ್ದೇನೆ, ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿ ಈ ಆಫೀಸುಗಳನ್ನು ರದ್ದು ಮಾಡಿ ಎಂದು. ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡ ಹಾಗೆ ಕಾಣುವುದಿಲ್ಲ. ಇದರಲ್ಲಿರುವ ಸದಸ್ಯರೆಂದರೆ ಡೆಪ್ಯುಟಿ ಕಮಿಷನರ್, ಇಂಜಿನಿಯರ್, ಡಿ. ಎಸ್. ಪಿ. ಮತ್ತು ಕೆಲವು ಖಾನಗಿಯವರು. ಇಂಥ ರಸ್ತೆಯಲ್ಲಿ ಸಂಚಾರ ಹೆಚ್ಚಾಗಿದೆ ಎಂದು ಡಿ. ಎಸ್. ಪಿ. ಅವರು ರಿಪೋರ್ಟ್ ಮಾಡುತ್ತಾರೆ ಮತ್ತು ಕಮಿಟಿಯಲ್ಲಿ ಆ ಮಾರ್ಗಕ್ಕೆ ಬಸ್ ಪರ್ಮಿಟ್ ರೀಜನರ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರು ಕೊಡುತ್ತಾರೆ. ಇಲ್ಲಿ ಯಾವರೀತಿಯಾಗಿ ಕೆಲಸ ನಡೆಯುತ್ತದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಟ್ರಾನ್ಸ್‌ಪೋರ್ಟ್ ಸೆಕ್ರೆಟರಿಯ ವಿಷಯ ಹೇಳುವ ಹಾಗೆಯೇ ಇಲ್ಲ. ಆದುದರಿಂದ ಆದಷ್ಟು ಜಾಗ್ರತೆ ಎಲ್ಲ ಮಾರ್ಗಗಳನ್ನೂ ರಾಷ್ಟ್ರೀಕರಣ ಮಾಡಿ ಸಾಧ್ಯವಿಲ್ಲದಿದ್ದರೆ ಅಥವಾ ಹೆಚ್ಚು ಉದ್ಯವಾದ ಮಾರ್ಗಗಳಲ್ಲಿ ರಾಷ್ಟ್ರೀಕರಣ ಮಾಡಿ, ಇಷ್ಟು ಮ್ಯೂಲಗಿಂತ ಹೆಚ್ಚಾಗಿದ್ದರೆ ರಾಷ್ಟ್ರೀಕರಣ ಮಾಡುತ್ತೇವೆ ಎಂದು ಒಂದು ತೀರ್ಮಾನ ತೆಗೆದುಕೊಂಡು ಉಳಿದ ಮಾರ್ಗಗಳನ್ನು ಖಾನಗಿಯವರಿಗೆ ಬಿಡಿ. ಹೀಗೆ ಮಾಡಿದರೆ ರಾಜ್ಯಕ್ಕೂ ಉತ್ಪತ್ತಿ ಬರುತ್ತದೆ.

ಸಹಕಾರದ ವಿಚಾರದಲ್ಲಿ ಈಚೆಗೆ ಸ್ವಲ್ಪ ಹೆಚ್ಚಾಗಿ ತನಿಖೆ ನಡೆಯುತ್ತಿದೆ, ಅಲ್ಲಲ್ಲಿ ಸ್ವಲ್ಪ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಎಲ್ಲೆಲ್ಲಿ ಮೋಸ ನಡೆಯುತ್ತಿದೆಯೋ ಅಲ್ಲೆಲ್ಲ ಸ್ವಲ್ಪ ತೀವ್ರವಾದ ಕ್ರಮಗಳನ್ನು ತೆಗೆದುಕೊಂಡರೆ, ತಪ್ಪಿತಸ್ಥರಿಗೆ ಶಿಕ್ಷೆ ಮಾಡಿದರೆ ಒಳ್ಳೆಯದು. ಇಲ್ಲದೆ ಹೋದರೆ ಸಂಸ್ಥೆಗಳಿಗೆ ಕೆಟ್ಟ ಹೆಸರು ಬರುತ್ತದೆ, ಸರ್ಕಾರಕ್ಕೂ ಕೂಡ ಕೆಟ್ಟ ಹೆಸರು ಬರುತ್ತದೆ. ಸಹಕಾರ ಸಂಸ್ಥೆಗಳಲ್ಲಿ ನಾನೂ ಕೂಡ ಅನೇಕ ವರ್ಷಗಳು ಕೆಲಸ ಮಾಡಿದ್ದೇನೆ. ಕೆಲವು ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿ ಎಂದು ಹೇಳಿದರೆ, ಹಾಗೆ ಮಾಡುವುದು ಸಹಕಾರ ತತ್ವಕ್ಕೆ ವಿರೋಧ, ಅಂಥ ಸೊಸೈಟಿಗಳನ್ನು ನರಿಪಡಿಸುತ್ತೇವೆಂದು ಹೇಳುತ್ತಾರೆ. ಅದನ್ನು ನರಿಪಡಿಸುವುದರೊಳಗಾಗಿ ಅಲ್ಲಿದುದ್ದು ತಿಂದು ಹಾಕಿರುವವರು ತಪ್ಪಿಸಿಕೊಂಡು ಹೋಗಿರುತ್ತಾರೆ. ಆಕ್ರಮಗಳು ನಡೆಯುವಂಥ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿದರೂ ಚಿಂತೆ ಇಲ್ಲ, ನೂರಕ್ಕೆ ಬದಲು ಹತ್ತು ಸೊಸೈಟಿಗಳು ಚೆನ್ನಾಗಿ ನಡೆದರೂ ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ; ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಸೊಸೈಟಿಗಳು ಚೆನ್ನಾಗಿ ನಡೆದು, ಅವು ಸರ್ಕಾರದಿಂದ ಬರತಕ್ಕ ಅನುಕೂಲಗಳನ್ನು ಉಪಯೋಗಿಸಿಕೊಂಡು ವ್ಯಾಪಾರದಲ್ಲಿ ಪೈಪೋಟಿಯಿಂದ ವ್ಯವಹಾರ ಮಾಡಲಿ. ಅದರಲ್ಲಿ ತಪ್ಪಿಲ್ಲ. ಆಗ ವ್ಯಾಪಾರಸ್ಥರೂ ಕೂಡ ತಿಳುವಳಿಕೆ ಹೊಂದಿ ಹೆಚ್ಚು ಲಾಭಕ್ಕೆ ಆಸೆ ಪಡದೆ ಸಹಕಾರ ಸಂಸ್ಥೆಗಳಂತೆಯೇ ನಡೆದು ಅವರೂ ಮಾರಾಟ ಮಾಡಬೇಕಾಗುತ್ತದೆ.

5-45 P.M.

ಸರ್ಕಾರದವರು ಸೊಸೈಟಿಗಳ ವಿಚಾರದಲ್ಲಿ ತೀವ್ರ ತನಿಖೆ ಇಟ್ಟುಕೊಳ್ಳುವಂತೆ ಸೂಚನೆಯನ್ನು ಕೊಡಬೇಕು. ನಾನು ಅನೇಕ ಅಧಿಕಾರಿಗಳಿಗೆ ಹೇಳಿದ್ದರೂ ಅವರು ಗಮನ ಕೊಡುವುದಿಲ್ಲ. ಆದ್ದರಿಂದ ಇಲಾಖೆಯ ಅಧಿಕಾರಿಗಳ ಗಮನಕ್ಕೆ ಏನಾದರೂ ದೂರುಗಳು ಬಂದಾಗ ತಕ್ಷಣ ಕ್ರಮ ತೆಗೆದುಕೊಳ್ಳುವಂತೆ ಆಗಿಂದಾಗ್ಗೆ ಎಚ್ಚರಿಕೆ ಕೊಡುತ್ತಿರಬೇಕು ಎಂದು ಹೇಳಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Sri JIVRAJ HIRACHAND SHAH.—Mr. Chairman, Sir, I support the Motion of Thanks moved by my hon. Friend Sri Adiga *in toto* because there is nothing in the Governor's Address which can be criticised.

In the matter of planning, the same ratio is being maintained.

In the case of Transport, 2,272 passenger vehicles are running and our Government has invested a capital of Rs. 18.65 crores and have earned a gross revenue of Rs. 14.56 crores. I think this is eommendable progress.

Coming to Education, there is commendable progress in this field also because whereas formerly there were only few primary schools, now there are thousands of primary schools. Several middle schools and colleges have also been started. Government has also made arrangements for giving mid-day meals to ehildren. This is indeed a commendable thing for which I compliment the Education Minister.

Coming to Rural Water Supply, out of 215 towns in the State, 118 towns have been provided with drinking water facilities. Nearly half the number of towns have been covered and I think this progress is commendable and our Government deserves to be complimented for it.

Again, in the field of Agriculture, there is vast progress. The area covered under high yielding varieties in 1967-68 was about 2.4 lakh acres and there is a programme to distribute 1.25 lakh tonnes of nitrogen in the form of artificial fertilizers and besides this there is production of 4.5 lakh tonnes of urban compost and 48 lakh tonnes of rural compost. This progress is also praiseworthy.

Our Government is trying its level best to intensify land reclamation and development work.

The State Agro-Industries Corporation has been established and the distribution of pumpsets and tractors has been entrusted to it. This scheme is also very essential.

Forests are a source of income. It is stated in the Address that afforestation is being done intensively and this programme has been intensified to cover an area of 4,40,000 acres with teak, soft-wood, cashew, rubber, linaloe, fuel and other species. Our Government is trying its level best to improve the source of income in this behalf and therefore there is nothing to be criticised.

In regard to Irrigation, 2.83 lakhs of acres have been covered. Our progress is much better when compared to other States. Of course there may be a lacuna, but it is very negligible.

Coming to the subject of Power, it is stated that during 1967-68, 800 villages will be electrified and about 12,000 pumpsets energised. It is further stated that the Electricity Board hopes to spend Rs. 9 crores on these works, and by the year 1968-69 it is expected that 7,689 villages would have been electrified and 78,612 irrigation pumpsets energised. Out of 25,000 villages, nearly one-third of the villages have been electrified. Therefore, the progress is very praiseworthy. We should support the Government instead of criticising it unnecessarily.

(SRI JIVRAJ HIRACHAND SHAH)

In regard to Communications, as against 13,783 miles of road in 1956 during the last three Plan periods, the road mileage has been doubled. If we look at the present map, 52,252 K.M. have been covered, which shows that we have made progress. They also intend to spend another Rs. 280 lakhs during 1968–69 on the construction of 80 miles of new roads and improvement of 200 miles of the roads in use, and 117 miles of roads will be asphalted. They have also programmed to construct 500 miles of rural roads and to complete 20 major bridges. Therefore the development is very praiseworthy.

In the case of Mines, our Government intend to exploit about 4 million tonnes of iron ore from Donimale range for export every year. Government is trying its level best to exploit all the economic sources. In spite of all these developments, the Opposition party always criticise the Government; let them do it, that is their look out.

The Governor, in his speech, has touched upon the achievements and also future planning. Therefore, there is nothing to be criticised.

I wish to say a few words in regard to the Mahajan Commission Report. When the Central Government is ready to accept Kutch award why not this award should be accepted as it is? Maharashtrians are playing tactics and are bringing pressure upon Central Ministers to have consensus about it, which creates doubt in our mind. They should not play such a game, because it is at the instance of Maharashtra that this Commission was appointed. Therefore, it should be accepted in toto by both the Governments. I request the Government to bring pressure on the Central Government that once it has been accepted, it has to be accepted for ever as an award, and that there should be no room to reopen this matter. If it is reopened, other difficulties will be created. The Governor in his speech has stated that it should be accepted.

I feel that we should send a Resolution again that the Commission Report should be accepted as it is.

With these few words, I wholeheartedly support the Motion moved by my friend Sri K. Suryanarayana Adiga, and I thank the Chair for having given me an opportunity to express my views.

†ಶ್ರೀ ಎನ್. ಸಿ. ಕುಬನದ.—ಮಾನ್ಯ ಸಭಾಪತಿಗಳೇ; ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನೆಯನ್ನ ಸಲ್ಲಿಸಲು ಶ್ರೀ ಅಡಿಗರವರು ಒಂದು ಸೂಚನೆಯನ್ನು ಮಂಡಿಸಿದ್ದಾರೆ. ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಆ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ನಮ್ಮಾರು 20 ವರ್ಷಗಳಲ್ಲಿ ಸರಕಾರದವರು ಜನತೆಯ ನಿರೀಕ್ಷೆಗೆ ಮೀರಿ ಕೆಲಸಮಾಡಿದ್ದಾರೆ. ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು, ಸಹಕಾರ ಮತ್ತು ಜನರ ಪರವಾಗಿ ಕೆಲಸ ಮಾಡುವವರು ಸರಕಾರದವರೇನು ಕೆಲಸಮಾಡಿದ್ದಾರೆಂಬುದನ್ನು ಜನತೆಗೆ ತಿಳಿಸಿ ಅದರ

ಜೊತೆಗೆ ಜನರಿಗೆ ಆಗಬೇಕಾಗಿರುವ ಕೆಲಸಗಳನ್ನು ಸರಕಾರದಿಂದ ಮಾಡಿಸಿಕೊಡಲು ಪ್ರಯತ್ನ ಮಾಡಬಹುದು.

ಮೈಸ್ ಚೇರ್‌ಮನ್ (ಶ್ರೀ ಗಾಂಜಿ ವೀರಪ್ಪ).—ಈಗ ಸಭೆ ಮುಕ್ತಾಯವಾಗಿ ನಾಳೆಯದಿನ 9 ಗಂಟೆಗೆ ಸೇರುವುದು.

———

The House adjourned at Six of the Clock to meet again at Nine of the Clock on Saturday the 24th February 1968.

———

V-, 32° N68
N68.34-1-15
(B) 5081

WD 19205—GPB—600—6-6-63